ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2020

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-20 ಸಂಚಿಕೆ-07 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪದ ಭೋಜನಾಲಯದ ಕಾಮಗಾರಿ ಪ್ರಗತಿಯಲ್ಲಿ





ಶ್ರೀ ಶಾರದಾ ಮಂಟಪದ ಭೋಜನಾಲಯದ ನವೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು ಛಾವಣಿಯ ಕೆಲಸ ಸಂಪೂರ್ಣವಾಗಿದೆ. ಮಳೆ ನೀರಿನ ಜಲಪೂರಣ, ಬಾವಿಗೆ ಸ್ಲಾಬ್, ಶೌಚಾಲಯದ ಛಾವಣಿಯ ಕೆಲಸ ಮುಕ್ತಾಯವಾಗಿದ್ದು ಭೋಜನಾಲಯದ ವಿಸ್ತೀರ್ಣ ಮೂರನೇ ಒಂದಂಶದಷ್ಟು ಹೆಚ್ಚಾಗಿರುತ್ತದೆ. ಇನ್ನೂ ಸುಮಾರು ತಿಂಗಳೊಪ್ಪತ್ತರ ಕೆಲಸ ಬಾಕಿಯಿದ್ದು ಸಪ್ಟಂಬರ್ ತಿಂಗಳ ಅಂತ್ಯದಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ. ಪದಾಧಿಕಾರಿಗಳು ಆಸಕ್ತಿಯಿಂದ ಈ ಕೆಲಸದಲ್ಲಿ ತೊಡಗಿಸಿಕೊಂಡಿದ್ದು ಸಮಾಜಬಾಂಧವರೂ ತನ್ನ ಸಹಕಾರ ನೀಡುತ್ತಿದ್ದಾರೆ.

ಹಲವಾರು ಮಹನೀಯರು ಉದಾರ ಧನಸಹಾಯ ನೀಡಿದ್ದು ಅವರ ವಿವರ ಇಂತಿದೆ :

| | | | |
|---|---|---|---|
| ಉಚ್ಚಿಲ ವಸಂತ ರಾವ್ | 25,001 | ಬಿ.ಆರ್.ರಾವ್, ಸಿಕಂದರಾಬಾದ್ | 10,000 |
| ಎನ್. ಪದ್ಮನಾಭ ರಾವ್, ಬೆಂಗಳೂರು | 15,000 | ಭಾಸ್ಕರ್ ರಾವ್ ಕೋಲ್ಪೆ, ಬೆಂಗಳೂರು | 10,000 |

### ವಿಶೇಷ ಸುದ್ದಿ

ಕೊರೊನಾ ಹಿನ್ನೆಲೆಯಲ್ಲಿ ಸಮಾಜಬಾಂಧವರ ಅನುಕೂಲಕ್ಕಾಗಿ ಸಭಾಂಗಣದ ಬಾಡಿಗೆಯನ್ನು ಅರ್ಧಕ್ಕಿಳಿಸುವ ಬಗ್ಗೆ ಆಡಳಿತ ಮಂಡಳಿಯು ನಿರ್ಣಯ ಕೈಗೊಂಡಿರುತ್ತದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

ಮೆನೇಜರ್ (0820–2520754).

ಈ ಪರಿಷ್ಕೃತ ಬಾಡಿಗೆಯು ಕೆಲವು ಷರತ್ತುಗಳೊಂದಿಗೆ ಮುಂದಿನ ನಿರ್ಣಯದ ತನಕ ಜಾರಿಯಲ್ಲಿರುತ್ತದೆ

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

**ಸಮಾಜಬಾಂಧವರಲ್ಲಿ ನಿವೇದನೆ**

ಉಡುಪಿಯ ಶ್ರೀ ಶಾರದಾ ಮಂಟಪದ ಭೋಜನಗೃಹವು ಆಧುನಿಕ ರೀತಿಯಲ್ಲಿ ನವೀಕರಣಗೊಳ್ಳುತ್ತಿದ್ದು ಅಂದಾಜು 50 ಲಕ್ಷ ರೂ ವೆಚ್ಚವನ್ನು ನಿರೀಕ್ಷಿಸಲಾಗಿದೆ. ಈ ಸಂದರ್ಭದಲ್ಲಿ ಸಮಾಜಬಾಂಧವರ ಸಹಾಯವನ್ನು ಆಡಳಿತ ಮಂಡಳಿಯು ಅಪೇಕ್ಷಿಸುತ್ತಿದೆ. ಅಂತೆಯೇ ರೂ.10 ಸಾವಿರಕ್ಕೆ ಮಿಗಿಲಾಗಿ ದೇಣಿಗೆಯಿತ್ತವರ ಹೆಸರನ್ನು ಶಾಶ್ವತ ಫಲಕದಲ್ಲಿ ಬರೆಯಲಾಗುವುದು. ರೂ.30 ಸಾವಿರ ದೇಣಿಗೆಯಿತ್ತವರಿಗೆ ಮುಂದಿನ ಹತ್ತು ವರ್ಷಗಳಲ್ಲಿ ಒಂದು ಕಾರ್ಯಕ್ರಮಕ್ಕೆ ಸಭಾಭವನವನ್ನು ಲಭ್ಯತೆಯ ಅನುಗುಣವಾಗಿ ಉಚಿತವಾಗಿ ನೀಡಲಾಗುವುದು. ಈ ಕೊಡುಗೆಯು ಕಾಮಗಾರಿ ಮುಕ್ತಾಯವಾಗುವ ತನಕ ಮಾತ್ರ ಊರ್ಜಿತದಲ್ಲಿರುವುದು. ಸಮಾಜಬಾಂಧವರು ತನು– ಮನ–ಧನಗಳ ಸಹಕಾರದೊಂದಿಗೆ ಈ ಕೊಡುಗೆಯನ್ನು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

ಅಧ್ಯಕ್ಷರು ಶ್ರೀ ಕೆ. ಮಂಜುನಾಥ ಹೆಬ್ಬಾರ್ (9611099894) ಹಾಗೂ
ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ (9343560647)

ತಮ್ಮ ದೇಣಿಗೆಯನ್ನು ಸಂಘದ ಈ ಕೆಳಗಿನ ಖಾತೆಗೆ ವರ್ಗಾಯಿಸಬಹುದು :

ಖಾತೆಯ ಹೆಸರು : STHANIKA BRAHMANA SANGHA(R)
SYNDICATE BANK, CARSTREET BRANCH UDUPI,
SB A/C no.01092200002928 IFSC code SYNB0000109

–ಆಡಳಿತ ಮಂಡಳಿ

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

**ಪ್ರಕಟಣೆ**

ಆತ್ಮೀಯ ಸಮಾಜ ಬಾಂಧವರೇ,

ನಮ್ಮ ಸಂಘದ ವತಿಯಿಂದ ಶ್ರೀ ಶಾರದಾ ದೇವಸ್ಥಾನದ ಹಿಂಭಾಗದಲ್ಲಿರುವ ನಾಗಬನದಲ್ಲಿ

**ನಾಗರಪಂಚಮಿಯು**

ತಾ.25-07-2020ನೇ ಶನಿವಾರ ಬೆಳಿಗ್ಗೆ ವಾಡಿಕೆಯಂತೆ ಸಂಕ್ಷಿಪ್ತವಾಗಿ ಜರಗಲಿರುವುದು.

| ಶ್ರೀ ಯು.ಅರವಿಂದ ಕುಮಾರ್ | ಶ್ರೀ ಬಿ.ಜಯರಾಮ ರಾವ್ | ಶ್ರೀ ಕೆ. ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು






# ಸಂಪಾದಕೀಯ.....

**- ಡಾ| ವೈ.ಸುದರ್ಶನ್ ರಾವ್**

ಕೊರೊನಾ ಪೀಡೆಯು ವಕ್ಕರಿಸಿರುವ ಈ ಕಷ್ಟಕಾಲದಲ್ಲಿ ಈ ದೇಶದ ಪ್ರಜ್ಞಾವಂತ ನಾಗರಿಕರಾಗಿ ಪ್ರತಿಯೊಬ್ಬರಲ್ಲೂ ಪರೋಪಕಾರೀ ಭಾವನೆ ಜಾಗೃತವಾಗಿರಬಹುದು. ಕೊರೊನಾ ಎಂಬ ಭೂತವನ್ನು ಕಳಿಸಿದ್ದುದು ಮಾತ್ರವಲ್ಲದೆ ಜೊತೆಗೆ ಅದರ ಪಿತಾಮಹನಾದ ಚೀನಾದೇಶ ಸ್ವತಃ ಆಗಮಿಸಿ ನಮ್ಮೊಂದಿಗೆ ಗಡಿತಂಟೆಗೆ ತೊಡಗಿದ್ದು ನಮ್ಮ ದೇಶದ ಸಮಸ್ಯೆಗಳು ಇನ್ನಷ್ಟು ಗಂಭೀರವಾಗುವಂತೆ ಮಾಡಿದೆ. ಚೀನಾದ ಸಮಸ್ಯೆಯನ್ನಾದರೂ ಸರಕಾರವು ಬಗೆಹರಿಸೀತು, ಆದರೆ ಕೊರೊನಾದಿಂದ ಉದ್ಭವಿಸಿರುವ ಸಮಸ್ಯೆಗಳು ನಮ್ಮ ನಿಮ್ಮೆಲ್ಲರ ಸಹಕಾರವಿಲ್ಲದೆ ಬಗೆಹರಿಯದು. ಹಾಗಿರುವಾಗ ಸಾರ್ವಜನಿಕರು ಈ ಸಂದರ್ಭದಲ್ಲಿ ನಮ್ಮ ದೇಶಕ್ಕೆ ಯಾವ ಯಾವ ರೀತಿಯಲ್ಲಿ ಕಿಂಚಿತ್ ಕೊಡುಗೆಯನ್ನು ನೀಡಬಹುದು ಎಂಬ ಬಗ್ಗೆ ಒಂದು ವಿಶ್ಲೇಷಣೆ...

ಎಲ್ಲಕ್ಕೂ ಮೊದಲಾಗಿ ನಾವು ಸ್ವತ: ಕೊರೊನಾ ರೋಗಿಯಾಗದಿರುವುದೇ ಅತ್ಯಂತ ದೊಡ್ಡ ಕೊಡುಗೆ. ನಗಬೇಡಿ, ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಆಸ್ಪತ್ರೆಗಳ ಸಂಖ್ಯೆ ಮಾತ್ರಾ ಹಾಗೆಯೇ ಇರುವುದರಿಂದ ಮಾತ್ರವಲ್ಲ, ಈ ಹೇಳಿಕೆಗೆ ಇನ್ನಷ್ಟು ಕಾರಣಗಳಿವೆ..., ಏನೆಂದು ವಿವರಿಸುತ್ತೇನೆ. ಯಾರಿಗಾದರೂ ಕೊರೊನಾ ಲಕ್ಷಣಗಳಿವೆಯೆಂದಾದರೆ ಅವನಿಗೆ ಕೊರೊನ ಪರೀಕ್ಷೆ ಮಾಡಲು ನಾಲ್ಕು ಜನ ಪಿಪಿಇ ಕಿಟ್ ಧರಿಸಬೇಕು (ತಮ್ಮನ್ನು ಅಪಾಯದಲ್ಲಿ ಒಡ್ಡಿಕೊಂಡು, ಹಾಗೆಯೇ ಆಸ್ಪತ್ರೆಗೆ ತೆರಳುವಾಗ ಜೊತೆಗಿದ್ದವರ ಮತ್ತು ಈಗಾಗಲೆ ಸಂಪರ್ಕಕ್ಕೆ ಬಂದವರ ಲೆಕ್ಕ ಬೇರೆಯೆ ಇದೆ), ಅದರ ವಿಲೇವಾರಿ ಆಗಬೇಕು, ಪರೀಕ್ಷೆಯ ವೆಚ್ಚ, ಪೊಸಿಟಿವ್ ರಿಪೋರ್ಟ್ ಬಂದವನನ್ನು ಆಸ್ಪತ್ರೆಗೆ ಸಾಗಿಸಲು ಪ್ರತ್ಯೇಕ ಆಂಬುಲೆನ್ಸ್, ಚಿಕಿತ್ಸೆಯ ಖರ್ಚು, ಅವನ ಸಂಪರ್ಕಕ್ಕೆ ಬಂದಿದ್ದವರ ಪತ್ತೆಯ ಕಷ್ಟ, ಅವರ ಮನವೊಲಿಸಿ ಅವರ ಪ್ರತ್ಯೇಕತೆಗೆ ವ್ಯವಸ್ಥೆ, ವಾರದನಂತರ ಅವರ ಕೊರೊನಾ ಪರೀಕ್ಷೆ, ಅವರೆಲ್ಲಾದರೂ ಪೊಸಿಟಿವ್ ಬಂದರೆ ಅವರನ್ನೂ ಆಸ್ಪತ್ರೆಗೆ ಸಾಗಿಸುವುದು, ಅವರ ಚಿಕಿತ್ಸೆ, ಅವರ ಸಂಪರ್ಕಿತರ ಪತ್ತೆ, ಪ್ರತ್ಯೇಕಿಸುವಿಕೆ, ವಾರದ ನಂತರ ಅವರ ಪರೀಕ್ಷೆ ... ಹೀಗೆ ಕಳೆದ ನಾಲ್ಕು ತಿಂಗಳಿನಿಂದ ಚರ್ವಿತಚರ್ವಣದಂತೆ ನಡೆಯುತ್ತಿರುವ ಈ ಕೆಲಸಕ್ಕೆ ನಮ್ಮ ಕಾಣಿಕೆ ನೀಡದಿರೋಣ. ನಮಗೆಲ್ಲರಿಗೂ ಕೊರೊನಾ ಖಾಯಿಲೆ ಯಾವ ರೀತಿ ನಮಗೆ ಬರಬಹುದು ಎಂಬುದು ತಿಳಿದಿದೆ. ಅನಗತ್ಯವಾಗಿ ಸುತ್ತಾಡದಿರುವುದು, ಮಾಸ್ಕ್ ಧರಿಸುವುದು, ಶಾರೀರಿಕ ಅಂತರ ಕಾಪಾಡುವುದರ ಜೊತೆಗೆ ಸಮಾರಂಭಗಳನ್ನು ಏರ್ಪಡಿಸಿ ಜನರನ್ನು ಒಟ್ಟುಗೂಡಿಸುವುದನ್ನೂ ಸಹಾ ನಾವು ಖಂಡಿತಾ ಮಾಡಬಾರದು. ಅಂತಹಾ ಅತ್ಯಗತ್ಯ ಸಮಾರಂಭವನ್ನು ಅತ್ಯಂತ ಕಡಿಮೆಯ ಕೇವಲ ಒಳವರ್ತುಲದ ಜನರನ್ನು ಮಾತ್ರಾ ಆಮಂತ್ರಿಸಿ ನಡೆಸಬೇಕಾಗಿರುವುದು ಪ್ರತಿಯೊಬ್ಬರ ಬದ್ಧತೆಯಾಗಿದೆ.

ಎರಡನೆಯದಾಗಿ ಅವಶ್ಯಕ ಚಿಕಿತ್ಸೆಗಾಗಿ ಮಾತ್ರಾ ಆಸ್ಪತ್ರೆಗೆ ತೆರಳಿರಿ. ಈ ಆರೋಗ್ಯ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸರಕಾರಿ ಆಸ್ಪತ್ರೆ–ಖಾಸಗೀ ಆಸ್ಪತ್ರೆ ಎಂಬ ಭೇದ ತೊಳೆದು ಹೋಗಿದೆ. ಒಟ್ಟಾರೆ ಆಸ್ಪತ್ರೆಗಳ ಸಂಖ್ಯೆ, ಅದರಲ್ಲಿ ಕೆಲಸಮಾಡುವ ವೈದ್ಯರು, ದಾದಿಯರ ಸಂಖ್ಯೆ ಸೀಮಿತವಾಗಿರುವ ಹಿನ್ನೆಲೆಯಲ್ಲಿ ಜನರಲ್ ಚೆಕ್ ಅಪ್ ಎಂದಾಗಲೀ, ಸಣ್ಣಪುಟ್ಟ ಕಾಯಿಲೆಗಳಿಗಾಗಲಿ ಹಾಗೂ ಮುಂದೂಡಬಹುದಾದ ಚಿಕಿತ್ಸೆಗಳಿಗಾಗಲಿ ಆಸ್ಪತ್ರೆಗೆ ಹೋಗಬೇಡಿರಿ. ಇದರಿಂದ ಆರೋಗ್ಯ ಸಿಬಂದಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಿ ಕೊರೊನಾ ಚಿಕಿತ್ಸೆಗೆ ಸಮಯ ತೊಡಗಿಸಲು ಅನುಕೂಲವಾಗುತ್ತದೆ. ಜೊತೆಗೆ ಆರೋಗ್ಯ ಸಿಬಂದಿಗಳಿಗೆ “ಸಾಮಾನ್ಯರೋಗಿಗಳ ರೂಪದಲ್ಲಿ ಬರುವ ಕೊರೊನಾ ರೋಗಿಗಳಿಂದ” ಕೊರೊನಾ ತಗಲಬಹುದಾದ ಅಪಾಯವೂ ಕಡಿಮೆಯಾಗುತ್ತದೆ. ಈಗಾಗಲೇ ಸಾವಿರಾರು ಸಂಖ್ಯೆಯ ಆರೋಗ್ಯ ಸಿಬಂದಿಗಳು ಇದೇ ಕಾರಣದಿಂದ ಕೊರೊನಾ ಪೀಡಿತರಾಗಿದ್ದಾರೆ. ನೂರಾರು ಮಂದಿ ಅಸುನೀಗಿದ್ದಾರೆ. ಈವಾಗಿನ ಸಂದರ್ಭದಲ್ಲಿ ಪ್ರತಿಯೊಬ್ಬ ಆರೋಗ್ಯ ಸಿಬಂದಿಯು ಅಮೂಲ್ಯ ಸೇನಾನಿಯಿದ್ದಂತೆ. ಅವರನ್ನು ಉಳಿಸಿಕೊಳ್ಳಿರಿ.

ಮೂರನೆಯದಾಗಿ ಆರ್ಥಿಕತೆಗೆ ಉತ್ತೇಜನ. ಕೊರೊನಾ ನಿಮಿತ್ತದಿಂದಾಗಿ ಹಾಗೊ ಅದರ ನಿಯಂತ್ರಣಕ್ಕಾಗಿ ಹೇರಲಾದ ಲಾಕ್ ಡೌನ್‌ನಿಂದಾಗಿ ಕೋಟ್ಯಾಂತರ ಮಂದಿ ಉದ್ಯೋಗ ಕಳೆದು ಕೊಂಡಿದ್ದಾರೆ. ಪ್ರವಾಸೋದ್ಯಮದಂತಹಾ ಕೆಲವು ಕ್ಷೇತ್ರಗಳ ಉತ್ತೇಜನ ಸಾಧ್ಯವಿಲ್ಲ. ಆದರೆ ಹಲವಾರು ಕ್ಷೇತ್ರಗಳಲ್ಲಿ ಮುಖ್ಯವಾಗಿ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಶಾರೀರಿಕ ಅಂತರ ಕಾಪಾಡಿಕೊಂಡು ಉತ್ಪಾದನೆಯನ್ನು ಮುಂದುವರೆಸಲು ಸಾಧ್ಯವಿದೆ. ಈ ಸಂದರ್ಭದಲ್ಲಿ ನಾವು ಕೇವಲ ಲಾಭವನ್ನು ಮಾತ್ರಾ ಗಣನೆಗೆ ತೆಗೆದುಕೊಳ್ಳಬಾರದು. ತಾವು ಕೆಲಸ ಮಾಡುವುದನ್ನು ನಿಲ್ಲಿಸಿದಲ್ಲಿ ಉಂಟಾಗುವ ನಿರುದ್ಯೋಗ, ವಸ್ತುಗಳ ಕೊರತೆ, ಬೆಲೆಯೇರಿಕೆ ಇತ್ಯಾದಿ ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ನಾವು ಚಿಂತಿಸಿ ನಮ್ಮ ಹೊಣೆಯನ್ನು ನಾವು ನಿಭಾಯಿಸಬೇಕಾಗಿದೆ. ಇದಕ್ಕೆ ಉದಾಹರಣೆಯಾಗಿ ನಾನು ಉಡುಪಿಯ ಎರಡು ಉದ್ಯಮ ಕ್ಷೇತ್ರಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೀಡುತ್ತೇನೆ. ಲಾಕ್‌ಡೌನ್ ಆರಂಭವಾದಂದಿನಿಂದ ಉಡುಪಿಯಲ್ಲಿ ಖಾಸಗಿ ಆಸ್ಪತ್ರೆಗಳು ರೋಗಿಗಳ ಕೊರತೆಯನ್ನು ಅನುಭವಿಸುತ್ತಿವೆ. ಕಾರಣ ಕೊರೊನಾ ಭೀತಿಯಿಂದಾಗಿ ಇತರ ರೋಗಿಗಳ ಸಂಖ್ಯೆಯಲ್ಲಿ ಇಳಿಕೆಯಾಗಿರುವುದು. ಆದರೂ ತುರ್ತುಚಿಕಿತ್ಸೆ ಅಗತ್ಯವಿರುವವರಿಗಾಗಿ ತಮ್ಮೆಲ್ಲಾ ಸೌಲಭ್ಯ ಹಾಗೂ ಸಿಬಂದಿಗಳನ್ನು ಉಳಿಸಿಕೊಂಡು ಲಾಭನಷ್ಟಗಳನ್ನು ಸಮದೂಗಿಸಿಕೊಂಡು ಆಸ್ಪತ್ರೆಗಳನ್ನು ನಡೆಸಿಕೊಂಡು ಬರುತ್ತಿರುವುದು ಒಂದು ಉದಾಹರಣೆ. ಇದಕ್ಕೆ ವಿರುದ್ಧವಾಗಿ ಖಾಸಗಿ ಬಸ್ಸುಗಳು ತಮಗೆ ಪ್ರಯಾಣಿಕರಿಲ್ಲದೆ ನಷ್ಟವಾಗುತ್ತದೆ ಹಾಗೂ ಅನಗತ್ಯವಾಗಿ ತೆರಿಗೆ ಕಟ್ಟಬೇಕಾಗುತ್ತದೆ ಎಂಬ ಕಾರಣಕ್ಕೆ ಲಾಕ್‌ಡೌನ್ ತೆರವಾಗಿ ತಿಂಗಳೆರಡಾದರೂ ಬಸ್ಸು ಸಂಚಾರ ಅರಂಭಿಸದೆ ಬೆರಳೆಣಿಕೆಯಲ್ಲಿರುವ ಬಸ್ಸುಗಳಲ್ಲಿ ಜನರು ಅನಿವಾರ್ಯವಾಗಿ ಒತ್ತೊತ್ತಾಗಿ ನಿಂತು ನೇತಾಡಿಕೊಂಡು ಪ್ರಯಾಣಿಸುವಂತಹಾ ಪರಿಸ್ಥಿತಿಯನ್ನು ಸೃಷ್ಟಿಸಿ ಕೊರೊನಾ ಹರಡಲು ತಮ್ಮ ಕಾಣಿಕೆಯನ್ನು ನೀಡುತ್ತಿರುವುದು ಇನ್ನೊಂದು ಉದಾಹರಣೆ. ಅದೇ ರೀತಿ ಜೀನಸಿ ಅಂಗಡಿಗಳವರು, ತರಕಾರಿ ಅಂಗಡಿಗಳವರೂ ಇಂತಹದೇ ಏನಾದರೂ ಕಾರಣವಿತ್ತು ತಮ್ಮ ಅಂಗಡಿಗಳನ್ನು ಮುಚ್ಚಿ ಕುಳಿತರೆ ಹೇಗೆ? ಆದುದರಿಂದ ಪ್ರತಿಯೊಬ್ಬರೂ ತಮ್ಮ ಉದ್ಯೋಗ ಕ್ಷೇತ್ರವು ತುರ್ತು ಅಗತ್ಯದ್ದು ಆಗಿರಲಿ ಅಥವಾ ಆಗದೇ ಇರಲಿ, ಕೊರೊನಾ ಹರಡದಂತೆ ಮುಂಜಾಗ್ರತೆ ಹಾಗೂ ಬದಲಾವಣೆಗಳನ್ನು ಮಾಡಿಕೊಂಡು ತಮ್ಮ ತಮ್ಮ ಉದ್ಯೋಗವನ್ನು ಮುಂದುವರಿಸಿಕೊಂಡು ಹೋಗಬೇಕಾಗಿರುವುದು ದೇಶದ ಆರ್ಥಿಕತೆಯನ್ನು ಸಹಜಸ್ಥಿತಿಗೆ ತರಲು ಅಗತ್ಯವಾಗಿದೆ.

ಆರೋಗ್ಯ ಪ್ರತಿಯೊಬ್ಬರ ಅಗತ್ಯ. ಕೊರೊನಾ ಸಮುದಾಯಕ್ಕೆ ಹರಡಿದ ಮೇಲೆ ಕೊರೊನಾದಿಂದಾಗುವ ಮರಣಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಧ್ಯೇಯವಾಗುತ್ತದೆ. ಈವತ್ತಿನ ಆರೋಗ್ಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕೊರೊನಾದಿಂದ ರೋಗಿಗಳ ಪ್ರಾಣವನ್ನು ಉಳಿಸಲು ಹಲವಾರು ಉಪಕರಣಗಳು ಆಸ್ಪತ್ರೆಗಳಿಗೆ ತುರ್ತಾಗಿ ಅಗತ್ಯವಿವೆ. ಒಂದೊಂದು ಆಸ್ಪತ್ರೆಗೆ ನೂರಾರು ಸಂಖ್ಯೆಯ ಮೊನಿಟರ್‌ಗಳು (ಒಂದೊಂದಕ್ಕೆ ಒಂದು ಲಕ್ಷರೂಪಾಯಿ ಬೆಲೆ) ಹಾಗೂ ಆಮ್ಲಜನಕ ಸರಬರಾಜು ಮಾಡುವ ಉಪಕರಣಗಳು (ಒಂದಕ್ಕೆ ಮೂರು ಲಕ್ಷ ರೂಪಾಯಿ ಬೆಲೆ) ಜೊತೆಗೆ ಹತ್ತು ಹನ್ನೆರಡು ಸಂಖ್ಯೆಯಲ್ಲಿ ವೆಂಟಿಲೇಟರ್ (ಸುಮಾರು 6 ಲಕ್ಷ ಬೆಲೆ) ಗಳು ಬೇಕಾಗಿವೆ. ಮಂಚ, ಹಾಸಿಗೆ, ತಲೆದಿಂಬು, ಬಟ್ಟೆ, ಹೊದಿಕೆ, ಬ್ಲಾಂಕೆಟ್ಟು, ಪಿಪಿಇ ಕಿಟ್ಟುಗಳು ಇತ್ಯಾದಿಗಳಂತೂ ಸಾವಿರಾರು ಸಂಖ್ಯೆಯಲ್ಲಿ ಬೇಕಾಗಿವೆ. ಸರಕಾರಿ ಆಸ್ಪತ್ರೆಯಾಗಲಿ ಖಾಸಗಿ ಆಸ್ಪತ್ರೆಯಾಗಲಿ ಇಂತಹಾ ಸಂಖ್ಯೆಯಲ್ಲಿ ಇಂತಹಾ ಬಜೆಟಿನ ಉಪಕರಣಗಳನ್ನು ತಾವಾಗಿಯೇ ಹೊಂದಿಸಿಕೊಳ್ಳಲಿ ಎಂದುಕಾದರೆ ಅದಕ್ಕಿಂತ ದೊಡ್ಡ ಮೂರ್ಖತನ ಬೇರೆ ಇಲ್ಲ ಎಂದು ಇದೇ ವೃತ್ತಿಯಲ್ಲಿರುವ ನಾನು ನನ್ನ ಅನುಭವದ ಆಧಾರದ ಮೇಲೆ ಹೇಳುತ್ತಿದ್ದೇನೆ. ಅಂದು ದೆಹಲಿ ಮುಂಬಯಿ, ಇಂದು ಬೆಂಗಳೂರಿನಲ್ಲಿ, ಹೋಗಲಿ ಅಮೆರಿಕಾ ಇಟಲಿಗಳಲ್ಲಿ ಚಿಕಿತ್ಸೆ ಸಿಗದೇ ಜನರು ಆಸ್ಪತ್ರೆಗಳ ವೆರಾಂಡಾದಲ್ಲಿ, ದಾರಿಯಲ್ಲಿ ಬಿದ್ದುಸತ್ತ ವಿಡಿಯೋಗಳು ಪೋಟೋಗಳು ಟಿವಿಮಾಧ್ಯಮಗಳಲ್ಲಿ ವಾಟ್ಸಾಫ್ ಫೇಸ್‌ಬುಕ್ಕುಗಳಲ್ಲಿ ಬಂದಮೇಲೂ ಕೂಡಾ ಸಾರ್ವಜನಿಕರಾಗಲೀ ಸಂಘ ಸಂಸ್ಥೆಗಳೇ ಆಗಲಿ ಇಂತಹಾ ಒಂದೇ ಒಂದು ಉಪಕರಣವನ್ನು ಯಾವುದೇ ಆಸ್ಪತ್ರೆಗೆ ಒದಗಿಸಿದ ಉದಾಹರಣೆ ಕಾಣದಿರುವುದು

(3ನೇ ಪುಟಕ್ಕೆ...)

**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾ, ಬಂಟ್ವಾಳ ವಲಯ (ರಿ.), ವಿಟ್ಲ ಮತ್ತು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳ

ದಿನಾಂಕ 11–07–2020 ನೇ ಶನಿವಾರ ಮೆಲ್ಕಾರ್‌ನಲ್ಲಿರುವ ಆರ್.ಕೆ.ಎಂಟರ್ ಪ್ರೈಸಸ್‌ನಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾ ಬಂಟ್ವಾಳ ಇದರ ಕಾರ್ಯಕಾರಿ ಸಭೆ ಮತ್ತು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ ಬಂಟ್ವಾಳ ಇದರ ಧರ್ಮದರ್ಶಿಗಳ ಪ್ರಥಮ ಸಭೆಯು ನಡೆಯಿತು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಕೃಷ್ಣ ಶರ್ಮಾ ಅನಾರು ವಹಿಸಿದ್ದರು, ಉಪಾಧ್ಯಕ್ಷರಾದ ಶ್ರೀಯುತ ದೇವರಾವ್ ಬೊಕ್ಕಸ ಹಾಗೂ ಕಾರ್ಯದರ್ಶಿ ಶ್ರೀಯುತ ಸಂತೋಷ್ ಕುಮಾರ್ ಬಿ.ಸಿ.ರೋಡ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕೋವಿಡೋತ್ತರ ಪ್ರಥಮ ಸಭೆಯನ್ನು ಸಾಮಾಜಿಕ ಅಂತರದೊಂದಿಗೆ ನಡೆಸಲಾಯಿತು. ಅನೇಕ ವಿಷಯಗಳು ಚರ್ಚೆಗೊಂಡವು. ಕೋವಿಡ್ ಮಹಾಮಾರಿಯು ಪ್ರಪಂಚವನ್ನು ಕಾಡುತ್ತಿರುವುದರಿಂದ ಸಮಾಜದ ಸುರಕ್ಷತೆಗಾಗಿ ಈ ವರ್ಷದ ಮಹಾಸಭೆಯನ್ನು ಮುಂದೂಡಿ, ಮುಂದಿನ ವರ್ಷ ನಡೆಸುವುದಾಗಿ ನಿರ್ಣಯಿಸಲಾಯಿತು.

ವಿದ್ಯಾರ್ಥಿ ವೇತನ ನೀಡುವ ಬಗ್ಗೆ ಚರ್ಚೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಪರೀಕ್ಷಾ ಫಲಿತಾಂಶಗಳು ಬಂದ ಬಳಿಕ ವಲಯ ಪ್ರಮುಖರು ವಿದ್ಯಾರ್ಥಿ ವೇತನ ಬಯಸುವವರ ಅರ್ಜಿಯನ್ನು ಪಡೆದು ವಿದ್ಯಾರ್ಥಿವೇತನ ಸಮಿತಿಗೆ ಸಲ್ಲಿಸುವಂತೆ ನಿರ್ಣಯಿಸಲಾಯಿತು. ಶ್ರೀ ಸುಬ್ರಮಣ್ಯ ಸಹಕಾರಿ ಸಂಘ (ಬ್ಯಾಂಕ್) ಮಂಗಳೂರು ಇದರ ಬಂಟ್ವಾಳ ಮತ್ತು ವಿಟ್ಲ ಶಾಖೆಗಳ ಸಲಹಾ ಸಮಿತಿಯ ಆಯ್ಕೆಯನ್ನು ಬ್ಯಾಂಕ್ ಅಧ್ಯಕ್ಷರ ಸಲಹೆಯ ಬಗ್ಗೆ, ಶೃಂಗೇರಿ ಜಗದ್ಗುರುಗಳ ಚಾತುರ್ಮಾಸ್ಯ ಪ್ರವಾಸದ ಬಗ್ಗೆ ಇನ್ನಿತರ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಿ ಸಲಹೆ ಸೂಚನೆಗಳನ್ನು ಪಡೆದು ನಿರ್ಣಯಿಸಲಾಯಿತು. ಬ್ಯಾಂಕ್‌ನ ಪರವಾಗಿ ಶ್ರೀಯುತ ನಾಗೇಶ ರಾವ್, ಆಡಳಿತ ನಿರ್ದೇಶಕರು ಸಲಹೆ ಸೂಚನೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಯುತ ಸಂತೋಷ್ ಕುಮಾರ್ ಬಿ.ಸಿ.ರೋಡ್ ಪ್ರಾಸ್ತಾವಿಕವಾಗಿ ಮಾತನಾಡಿ ವಿಷಯವನ್ನು ಮಂಡಿಸಿದರು. ಖಜಾಂಚಿ ನಿತಿನ್ ಕುಮಾರ್ ಕಲ್ಲಡ್ಕ ಇವರು ಹಣಕಾಸಿನ ವರದಿಯನ್ನು ಮಂಡಿಸಿದರು.

ನಂತರ ನಡೆದ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳ ಇದರ ಪ್ರಥಮ ಸಭೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ ಬಂಟ್ವಾಳ ಇದರ ಗೌರವಾಧ್ಯಕ್ಷರಾದ ಶ್ರೀಯುತ ಕೃಷ್ಣಶರ್ಮ ಅನಾರು ಅಧ್ಯಕ್ಷರಾದ ಶ್ರೀಯುತ ಭವಾನಿಶಂಕರ ರಾವ್ ಬಿ.ಸಿ.ರೋಡ್ ಸಹ ಕಾರ್ಯದರ್ಶಿಯವರಾದ ಶ್ರೀಯುತ ಸತೀಶ್ ರಾವ್ ಪೆರ್ನೆ, ಖಜಾಂಚಿ ಶ್ರೀಯುತ ಹರೀಶ್ ಕುಮಾರ್ ವಿ. ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಪ್ರತಿಷ್ಠಾನಕ್ಕೆ ಸಂಬಂಧಪಟ್ಟ ಮುದ್ರೆಗಳು, ಲೋಗೋ ಮತ್ತು ಕಡತ ಸಂಬಂಧಿ ಪತ್ರಗಳ ಮುದ್ರಣಕ್ಕೆ ಹಾಗೂ ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಭೆಯ ಅನುವು ಪಡೆಯಲಾಯಿತು. ಸಭಾಕ್ಕೆ ಕಾವಳಕಟ್ಟೆಯಲ್ಲಿ ದಾನಿಗಳು ನೀಡಿದ್ದ ಜಾಗದ ಜವಾಬ್ದಾರಿಯನ್ನು ಪ್ರತಿಷ್ಠಾನಕ್ಕೆ ಸಭಾದ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಮೂಲಕ ಪ್ರತಿಷ್ಠಾನದ ಅಧ್ಯಕ್ಷರಿಗೆ ಹಸ್ತಾಂತರಿಸಲಾಯಿತು. ಸಭೆಯು ಇದನ್ನು ಅಂಗೀಕರಿಸಿರುತ್ತದೆ. ಪ್ರತಿಷ್ಠಾನವು ಮುಂದೆ ಕಟ್ಟಡ ನಿರ್ಮಾಣಕ್ಕೆ ಬೇಕಾದ ಯೋಜನೆಯನ್ನು ರೂಪುರೇಷೆಯನ್ನು ಹಾಕುವ ಬಗ್ಗೆ ಮತ್ತು ಉಪ ಸಮಿತಿಗಳನ್ನು ರಚಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಕಾವಳಕಟ್ಟೆಯಲ್ಲಿ ಪ್ರತಿಷ್ಠಾನಕ್ಕೆ ನೀಡಿರುವ ನಿವೇಶನವನ್ನು ವೀಕ್ಷಿಸುವರೇ ದಿನಾಂಕ 31.07.2020ರಂದು ಬೆಳಗ್ಗೆ ಹತ್ತು ಗಂಟೆಗೆ ಪ್ರತಿಷ್ಠಾನದ ಧರ್ಮದರ್ಶಿಗಳು ಭೇಟಿ ನೀಡುವುದೆಂದು ನಿರ್ಧರಿಸಲಾಯಿತು. ಮುಂದೆ ಸಭಾ ಮತ್ತು ಪ್ರತಿಷ್ಠಾನ ಸಭೆ ಸೇರುವುದರ ಬಗ್ಗೆ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ ಚರ್ಚಿಸಲಾಯಿತು. ನಿತಿನ್ ಕುಮಾರ್ ಕಲ್ಲಡ್ಕ ಅವರು ನೆರೆದಿರುವವರನ್ನು ವಂದಿಸಿ ಕಾರ್ಯಕ್ರಮವನ್ನು ಉಪಾಹಾರದೊಂದಿಗೆ ಮುಕ್ತಾಯಗೊಳಿಸಲಾಯಿತು.

ಕೃಷ್ಣ ಶರ್ಮರು ಅನಾರು ಅಧ್ಯಕ್ಷರು (ಸಭಾ)
ಹಾಗೂ ಗೌರವಾಧ್ಯಕ್ಷರು (ಪ್ರತಿಷ್ಠಾನ)
ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ(ರಿ)
ಬಂಟ್ವಾಳ ವಲಯ–ವಿಟ್ಲ.

### ಸಂಪಾದಕೀಯ.....

■...2ನೇ ಪುಟದಿಂದ

ಅಶ್ಚರ್ಯಕರವಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ಸಾಧ್ಯವಿದ್ದವರೆಲ್ಲರೂ ಹಿಂಜರಿಕೆಯನ್ನು ಬದಿಗೊತ್ತಿ ತಾವಾಗಿಯೇ ಮುಂದೆ ಬಂದು ಜಿಲ್ಲಾಡಳಿತವನ್ನೋ ಕೋವಿಡ್ ಆಸ್ಪತ್ರೆಯನ್ನೋ ಸಂಪರ್ಕಿಸಿ ಒಂದೊಂದು ಉಪಕರಣವನ್ನು ದಾನಮಾಡಿ ಮುಂಬರಲಿರುವ ಆರೋಗ್ಯ ತುರ್ತುಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗಿರಬೇಕಾಗಿದೆ. ಕೊರೊನಾದಂತಹಾ ಖಾಯಿಲೆ ನಮಗೆ ಹೊಸತು, ಅದರ ಪರಿಣಾಮಗಳೂ ಹೊಸತು. ಆದುದರಿಂದ ಅದನ್ನು ಅಷ್ಟೇ ಒಗ್ಗಟ್ಟಿನಿಂದ ಹಾಗೂ ಉಪಾಯದಿಂದ ಎದುರಿಸದಿದ್ದರೆ ನಮ್ಮಲ್ಲಿ 173 ಕೋಟಿ ಸಂಖ್ಯೆಯ ಜನರಿದ್ದರೂ ಈ ಯುದ್ಧದಲ್ಲಿ ಸೋತು ಹೋದೇವು ಅಲ್ಲವೇ?

## ಶ್ರೀ ಶಾರದಾಂಬ ಭಜನಾ ಮಂಡಳಿ–ಸುಬ್ರಹ್ಮಣ್ಯ ಸದನ, ಮಂಗಳೂರು



ದಿನಾಂಕ 12.06.2020 ರಂದು ನಮ್ಮ ಶಾರದಾಂಬ ಭಜನಾ ಮಂಡಳಿಯ ಪ್ರಥಮ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕೊರೋನಾ ಹಾವಳಿ, ಲಾಕ್‌ಡೌನ್ ಪರಿಣಾಮದಿಂದ ವಾಟ್ಸಪ್‌ನಲ್ಲಿಯೇ ಅಧ್ಯಕ್ಷೆ ಕುಸುಮಾ ನವೀನ್‌ರವರು ಸಂಯೋಜನೆ ಮಾಡಿ ಅಭೂತ ಪೂರ್ವವಾಗಿ ನಡೆಸಿಕೊಟ್ಟರು. ಈ ಬಗ್ಗೆ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಹರ್ಷ ಕುಮಾರ್ ಕೇದಿಗೆ. ಉಪಾಧ್ಯಕ್ಷರಾದ ಎ.ಸಿ.ಕೃಷ್ಣ, ಉಪಾಧ್ಯಕ್ಷೆ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಕರುಣಾಕರ ಬೆಳ್ಳೆ, ಯುವ ವೇದಿಕೆ ಅಧ್ಯಕ್ಷ ಮನೀಶ್ ರಾವ್‌ರವರನ್ನು ಭಜನಾ ಮಂಡಳಿಯ ವಾಟ್ಸಪ್‌ಗೆ ಸೇರಿಸಿ ಕಾರ್ಯಕ್ರಮ ನಡೆಸಲಾಯಿತು.

ಆ ದಿನದ ವಿಶೇಷತೆ ಎಂದರೆ ಮಂಡಳಿಯ ಎಲ್ಲಾ ಸದಸ್ಯರು ಒಟ್ಟು 45 ಭಜನೆಗಳನ್ನು ಹಾಡಿ ಆಡಿಯೋ ನೋಡಿ ವಾಟ್ಸಪ್‌ಗೆ ಕಳಿಸಿದ್ದು ಅಪರಾಹ್ನ 3.00 ಗಂಟೆಗೆ ವಾಟ್ಸಪ್‌ನಲ್ಲಿಯೇ ಅಧ್ಯಕ್ಷೆಯವರ ಮಗಳು ರೇಷ್ಮಾ ವಸಂತ್, ಮೊಮ್ಮಗ ಅನೀಶ್‌ರವರು ಮಂಡಳಿಯ ಕಾರ್ಯಕ್ರಮಗಳ ತುಣುಕುಗಳನ್ನು ಸೇರಿಸಿ ಯೂಟ್ಯೂಬ್‌ನಲ್ಲಿ ವೀಡಿಯೋ ಹಾಕಿದರು. ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆದ ಹಾಗೆ ಅಧ್ಯಕ್ಷೆಯವರು ಸ್ವಾಗತ ಭಾಷಣ ಮಾಡಿದಾಗ ಎದುರಿಗೆ ಸದನದ ಎಲ್ಲಾ ಅತಿಥಿಗಳು ಉಪಸ್ಥಿತರಿದ್ದ ಹಾಗೆ ಕಾಣುತ್ತಿತ್ತು. ಪ್ರಾರ್ಥನೆಯನ್ನು ಕುಸುಮಾ ನವೀನ್ ಹಾಗೂ ಪುಷ್ಪಾವತಿ ಶ್ರೀನಿವಾಸ್ ಮಾಡಿದರು.

ನಮ್ಮ ಭಜನಾ ಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿ ಹಾಗೂ ಶಾರದಾ ಯಸ್.ರಾವ್‌ರವರನ್ನು ಫಲ, ಪುಷ್ಪ ನೀಡಿ ಅಭಿನಂದಿಸಲಾಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆಶಾ ರವೀಂದ್ರನಾಥ್‌ರವರು ಹಾಡಿದ ಭಜನೆ, ಸುಮಂಗಲಾ ಪ್ರಭಾಕರರವರ ಚಪ್ಪಾಳೆ ಹಾಡು, ಶಾರದಾರವರ ಸೆಕ್ಸೋಫೋನ್ ವಾದನ, ಮೊದಲೇ ಸದನದ ಸದಸ್ಯರು ಅಭಿನಯಿಸಿದ "ಶಿವಶಕ್ತಿ ರೂಪಕದ" ಸಮುದ್ರ ಮಥನದ ಒಂದು ದೃಶ್ಯವನ್ನು, ಭಜನಾ ಮಂಡಳಿಯವರು ನಡೆಸಿಕೊಟ್ಟ ಭಜನಾ ಕಾರ್ಯಕ್ರಮಗಳ ದೃಶ್ಯಗಳನ್ನು ಪ್ರದರ್ಶಿಸಲಾಯಿತು.

ವಾಟ್ಸಪ್ ಕಾರ್ಯಕ್ರಮದಲ್ಲಿ ಸಹಕರಿಸಿದ ಎಲ್ಲರಿಗೂ ಕಾರ್ಯದರ್ಶಿ ಪುಷ್ಪಾವತಿ ಶ್ರೀನಿವಾಸ ಧನ್ಯವಾದ ನೀಡಿದರು. ಈ ವಾಟ್ಸಪ್ ವಾರ್ಷಿಕೋತ್ಸವ ಕಾರ್ಯಕ್ರಮ ಯಾರೂ ನಡೆಸದ ರೀತಿಯಲ್ಲಿ ವೀಡಿಯೋ ಮಾಡಿ ಪ್ರದರ್ಶಿಸಿದ್ದು ಅಪಾರ ಜನರ ಮೆಚ್ಚುಗೆಯನ್ನು ಗಳಿಸಿತು.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು

## ಕರೋನಾ ಹಾಗೂ ಕರಶುದ್ಧಿ ದ್ರಾವಣ

ಲೇಖಕ : ಜಿ.ಕೆ. ಕೋಲ್ಪೆ

ಉಡುಪಿಯ ಸುತ್ತಮುತ್ತ ಈ ಹಿಂದೆ ಯಾತ್ರಾರ್ಥಿಗಳಿಂದ, ಹಿರಿಯ-ಕಿರಿಯ ನಾಗರಿಕರಿಂದ ಜಾತ್ರೆ-ಉತ್ಸವಗಳಲ್ಲಿ ಹದಿಹರೆಯದವರಿಂದ ಗಿಜಿಗುಟ್ಟುತ್ತಿತ್ತು. ಆದರೆ ಇಂದು 'ಕರೋನ' ಎಂಬ ಮಹಾಮಾರಿ ಎಲ್ಲರ ಹೆಚ್ಚಿನ ಸ್ವಾಂತತ್ರ್ಯ ಕಸಿದುಕೊಂಡು ಊರನ್ನೆಲ್ಲಾ ಬರಡಾಗಿಸಿ ಗ್ರಹಣ ಬಡಿದಂತಾಗಿದೆ. 'ಗ್ರಹಣ' ಎಂಬ ಶಬ್ಧ ಪತ್ರಿಕೆಗಳಲ್ಲಿ ಮುಖ್ಯವಾಗಿ ದೃಶ್ಯ ಮಾಧ್ಯಮಗಳಲ್ಲಿ (ಟಿ.ವಿ) ಖ್ಯಾತ ಜ್ಯೋತಿಷಿಗಳ ಮುಖಾಂತರ ಕಳೆದ ಸೂರ್ಯಗ್ರಹಣದ ಬಗ್ಗೆ 27 ನಕ್ಷತ್ರ 12 ರಾಶಿಯವರ ಭವಿಷ್ಯ ಜಾಲಾಡಿ, ವಿಮರ್ಶೆ-ಎಚ್ಚರಿಕೆಗಳನ್ನು ಹೇಳುತ್ತಾ ಕರ್ನಾಟಕ ಜನತೆಯನ್ನು ಭಯಭೀತರಾಗಿಸಿದ್ದು ಎಲ್ಲರಿಗೂ ತಿಳಿದಿದೆ. ಈ ಪರಿಸ್ಥಿತಿಯಲ್ಲಿ ಆಚೆ ದೂರ-ಈಚೆ ಹತ್ತಿರದಲ್ಲಿರುವ ಹಿರಿಯನಾಗರಿಕನಾದ ನಾನು ನೋವಿನಲ್ಲಿದ್ದ ಹಲ್ಲು ಕೀಳಿಸುವ ನೆಪದಲ್ಲಿ ಗ್ರಹಣಕ್ಕೆ 3-4 ದಿವಸಗಳಿರುವಾಗ ಹೊರಗೆ ಹೊರಟೆ. ನನ್ನ ನಕ್ಷತ್ರ-ರಾಶಿಗೆ ಗಂಡಾಂತರವಿದೆಯೆಂದು ತಿಳಿದು 'ಗ್ರಹಣ ಶಾಂತಿ' ಸೇವೆಯ ಬಗ್ಗೆ ವಿಚಾರಿಸಲು ರಥಬೀದಿಯ 'ಅನಂತೇಶ್ವರ'ನ ಸನ್ನಿಧಿಗೆ ತಲುಪಿ ವಿಚಾರಿಸಿದಾಗ, 'ಭಗವಂತನು ನಿತ್ಯ ಪೂಜಾದಿಗಳನ್ನು ಹೊರತು ಪಡಿಸಿ, ಸದ್ಯ ಯಾವುದೇ ವಿಶೇಷ ಸೇವೆಗಳನ್ನು ಸ್ವೀಕರಿಸಬಾರದೆಂದು, ಸರಕಾರ ಸೂಚನೆ ಕೊಟ್ಟಿದೆ' ಎಂಬುದಾಗಿ ಪುರೋಹಿತರು ಭಾರವಾದ ಮನಸ್ಸಿನಿಂದ ತಿಳಿಸಿದರು. ಕಾರಣ 'ಕರೋನ' ನಿರ್ಬಂಧ.

'ಭಗವಂತಾ, ಇದೇನು ನಿನ್ನ ಲೀಲೇ? ಈ 'ವೈರಾಣು ಯುದ್ಧ' ಸಾರಿ ಪ್ರಪಂಚವನ್ನೇ ಆಪೋಷನ ತೆಗೆದುಕೊಳ್ಳಲು ಹೊರಟ ಆ 'ಚೀನೀಕಾಯಿ' ದೇಶದ ಈ ಘನಕಾರ್ಯ ಎಷ್ಟು ಸರಿ? ಬಹುಶಃ ಜನಸಂಖ್ಯಾ ನಿಯಂತ್ರಣಕ್ಕೆ ನಿನ್ನದೇ ಚಿಂತನೆ ಇರಬಹುದು!

'ಲೋಕಾ ಸಮಸ್ತ ಸುಖಿನೋ ಭವಂತುಃ, ಸಮಸ್ತ ಸನ್ಮಂಗಳಾನಿ ಭವಂತು" ಎಂದು ಹಾರೈಸುವ ನಮ್ಮ ಭರತಭೂಮಿಯ ಸಜ್ಜನರನ್ನು ಉಳಿಸಪ್ಪಾ ಎಂದು ಮೊರೆಯಿಟ್ಟು ಕಾಣಿಕೆ ಹಾಕಿ ಅಡ್ಡಬಿದ್ದು ಹಿಂತಿರುಗಿದೆ. ದಾರಿಯಲ್ಲಿ ಬಾಲ್ಯದ ಶಾಲಾ ಸ್ನೇಹಿತ ಹಾಗೂ ನನ್ನ ಬ್ಯಾಂಕಿನಲ್ಲೇ ಉದ್ಯೋಗ ಮಾಡಿ ನಿವೃತ್ತರಾದ ಜನಾರ್ಧನ ಭಟ್ಟರ ಭೇಟಿಯಾಯ್ತು. ಇಬ್ಬರೂ ಮುಖವಾಡ (ಮಾಸ್ಕ್) ಸ್ವಲ್ಪ ಕೆಳಗಿಳಿಸಿ ಕೈಕುಲುಕಲು ಮುಂದಾದಾಗ ಅವರು ಕಿಸೆಯಲ್ಲಿದ್ದ ಕರಶುದ್ಧಿ ದ್ರಾವಣದ (ಹ್ಯಾಂಡ್ ಸ್ಯಾನಿಟೈಜರ್) ಸಣ್ಣ ಬಾಟಲಿ ತೆಗೆದು ಅವರ ಕೈಗೆ ಹಾಕಿಕೊಂಡು, ನನ್ನ ಕೈಗೂ ಸಂಪಡಿಸಿ ಇನ್ನು 'ಹಸ್ತಲಾಘವ' ನಡೆಯಲಿ ಎಂದರು. ಇಷ್ಟೆಲ್ಲಾ ತಾಪತ್ರಯ ಯಾಕೆ ಭಟ್ರೆ? ಕೈ ಜೋಡಿಸಿ ನಮಸ್ಕಾರ ಎನ್ನಿ ಎಂದೆ. ಖಂಡಿತ, ನನಗೊಪ್ಪಿಗೆ ಎಂದರು. ಲೋಕಾಭಿರಾಮ ಮಾತಾಡಿ, ಅವರು ಬಂದ ಉದ್ದೇಶವು ನನ್ನದೇ ಎಂದು ಗೊತ್ತಾಗಿ, "ಆ ಸೇವೆ ಸದ್ಯಕ್ಕೆ ಲಭ್ಯವಿಲ್ಲ" ಎಂದು ತಿಳಿಸಿದೆ. ಏನೋ ಗೊಣಗುತ್ತಾ ಇನ್ನೊಮ್ಮೆ ಕೈ ಎತ್ತಿ ಹಿಂತಿರುಗಿದರು. ನಾನು ದಂತವೈದ್ಯರ ಕಡೆ ಹೊರಟೆ.

ಸರಕಾರದ ಬಿಗಿ ಕಾನೂನಿಂದ, ದೇವಾಲಯಗಳಲ್ಲಿ, ಅಂಗಡಿ-ಹೋಟೆಲ್‌ಗಳಲ್ಲಿ ಸಾರಿಗೆ ವ್ಯವಸ್ಥೆಗಳಲ್ಲಿ, ಎ.ಟಿ.ಎಂ ಗಳಲ್ಲಿ ಸರಕಾರಿ ಕಛೇರಿಗಳಲ್ಲಿ ಎಲ್ಲೆಲ್ಲಿಯು ಕರಶುದ್ಧಿ ದ್ರಾವಣದ್ದೇ ಕಾರುಬಾರು. ನಾನಾ ರೀತಿಯ ಮುಖ ಕವಚಗಳನ್ನು ಧರಿಸಿದ ಸಾರ್ವಜನಿಕರು-ಗುರುತು ಸಿಗಲಿ ಬಿಡಲಿ ದೂರದಿಂದಲೇ "ಹಾಯ್-ಹಲೋ" ಹೇಳುತ್ತಿರುವ ಸಣ್ಣ ಮಕ್ಕಳ-ವಯೋವೃದ್ಧರ ಚಲನವಲನಗಳಿಗೆ ಸರಕಾರ ನಿಯಂತ್ರಣ ಹೇರಿದೆ. ಸಭೆ-ಸಮಾರಂಭಗಳಲ್ಲಿ ಅಂತರ ಕಾಯ್ದುಕೊಳ್ಳುವುದು/ಗುಂಪು, ಹರಟೆ ಇತ್ಯಾದಿಗೆ ಇನ್ನೂ ಕಡಿವಾಣ ಬಿದ್ದಿಲ್ಲ. ರಾಜಕೀಯ ಮುಂದಾಳುಗಳು ಮಾದರಿಯಾಗಿ ನಡೆದುಕೊಂಡರೆ ಪ್ರಜೆಗಳೂ ಖಂಡಿತ ಸರಕಾರದ ನಿಯಮಗಳನ್ನು ಉಲ್ಲಂಘಿಸಲಾರರು. ಬಹುಮುಖ್ಯವಾಗಿ ಈ ರೋಗ ನಿಯಂತ್ರಣಕ್ಕೆ ತಮ್ಮ ಜೀವವನ್ನೇ ಮುಡುಪಾಗಿಟ್ಟ ಕರೋನಾ ವಾರಿಯರ್ಸ್ (ಕರೋನಾ ನಿಯಂತ್ರಣ ಯುದ್ಧ ವೀರರು)ಗಳಾದ ವೈದ್ಯರಿಗೆ, ಕಾರ್ಯಕರ್ತರಿಗೆ ಹಾಗೂ ಇತರ ಸಿಬ್ಬಂದಿಗಳಿಗೆ ನಾವೆಲ್ಲಾ ಋಣಿಯಾಗಿರೋಣ. ನಮ್ಮ ಸಹಕಾರ ಅವರಿಗಿರಲಿ! ಅಂತಿಮವಾಗಿ ಈ ವೈರಾಣು ಯುದ್ಧದಲ್ಲಿ ಗೆಲುವು ನಮ್ಮದೇ!

**ಇದೊಂದು 'ಕರೋನಾ' ಹಾಸ್ಯ ಪ್ರಸಂಗ :** ನನ್ನ ಹತ್ತಿರದ ಸಂಬಂಧಿಯೋರ್ವರಿಗೆ ಅವರ ಸ್ನೇಹಿತರಿಂದ ಮದುವೆ ನಿಶ್ಚಿತಾರ್ಥ ಒಂದಕ್ಕೆ ಆಮಂತ್ರಣ ಬಂತು. "ಆರೋಗ್ಯ ಸರಿ ಇಲ್ಲವೆಂದು ನಿಮಗೆ ತಿಳಿದಿದೆ. ಗ್ರಹಚಾರವೂ ಕೆಟ್ಟಿದೆ. ಕಾರ್ಯಕ್ರಮಕ್ಕೆ ಬಂದಲ್ಲಿ 'ಕರೋನಾಳು' ನನ್ನನ್ನು ತಬ್ಬಿಕೊಂಡರೆ, ಎಂಟು ಮೀಟರ್ ಬಟ್ಟೆ ಸುತ್ತುವ ಬದಲು ಪ್ಲಾಸ್ಟಿಕ್ ಚೀಲದೊಳಗೆ (ಪಿ.ಪಿ.ಸಿ ಕಿಟ್) ತುಂಬಿ ಹೆಂಡತಿ, ಮಕ್ಕಳಿಗೆ ಕೂಡಾ ಮುಖದರ್ಶನ ಸಿಗದೆ, ಅಂತ್ಯಸಂಸ್ಕಾರವಿಲ್ಲದೆ ಸೀದಾ ವಿದ್ಯುತ್ ಚಿತಾಗಾರಕ್ಕೆ ಸಾಗಬೇಕಾಗಬಹುದು. ಕ್ಷಮಿಸಿ, ಬರಲಾಗುವುದಿಲ್ಲ" ಎಂದರಂತೆ. ಹಾಸ್ಯ ಪ್ರಿಯರಾದ ಸ್ನೇಹಿತರೀರ್ವರೂ ಮೊಬೈಲ್ ಮೂಲಕ ಹೊಟ್ಟೆತುಂಬಾ ನಕ್ಕರಂತೆ!

## ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್-ಮೂರು ಚಿನ್ನದ ಪದಕ ಡಾ| ಗೌತಮಿ.ಕೆ



2019ನೇ ಸಾಲಿನ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು ಇವರು ನಡೆಸಿದ ದಂತ ವೈದ್ಯಕೀಯ (ಬಿ.ಡಿ.ಎಸ್) ಪದವಿ ಪರೀಕ್ಷೆಯಲ್ಲಿ ಡಾ| ಗೌತಮಿ ಕೆ. ರಾಜ್ಯದಲ್ಲಿ ದ್ವಿತೀಯ ರ್‍ಯಾಂಕ್‌ಗಳಿರುತ್ತಾರೆ ಹಾಗೂ ವಿಶ್ವವಿದ್ಯಾಲಯದ ಮೂರು ಚಿನ್ನದ ಪದಕ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ.

ಬ್ರಹ್ಮಾವರದ ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್ ಇದರ ಹಳೆ ವಿದ್ಯಾರ್ಥಿಯಾಗಿದ್ದು, ದಿ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜು ಬೊಮ್ಮನಹಳ್ಳಿ, ಬೆಂಗಳೂರು ಇಲ್ಲಿ ಪದವಿ ಶಿಕ್ಷಣ ಪಡೆದಿದ್ದಾರೆ. ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ಪಾಠ ಹಾಗೂ ಪಾಠೇತರ ಚಟುವಟಿಕೆಗಳಲ್ಲಿ ಮಾಡಿದ ಉತ್ಕೃಷ್ಟ ಸಾಧನೆಗೆ ಕಾಲೇಜು "ವರ್ಷದ ಅತ್ಯುತ್ತಮ ವಿದ್ಯಾರ್ಥಿ" ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಸ್ತುತ ಸ್ನಾತಕೋತ್ತರ ಉನ್ನತ ಶಿಕ್ಷಣವನ್ನು ಆರ್ಥೋಡೊಂಟಿಕ್ಸ್ ವಿಭಾಗದಲ್ಲಿ ಎ.ಬಿ.ಶೆಟ್ಟಿ ದಂತ ವೈದ್ಯಕೀಯ ಕಾಲೇಜು ದೇರಳಕಟ್ಟೆ, ಮಂಗಳೂರಿನಲ್ಲಿ ಪಡೆಯುತ್ತಿದ್ದಾಳೆ. ವಿವಿಧ ಲಲಿತ ಕಲೆಗಳಲ್ಲೂ ತನ್ನನ್ನು ತೊಡಗಿಸಿಕೊಂಡಿದ್ದು ಗುರು ವಿದ್ವಾನ್ ಮಧೂರು ಬಾಲಸುಬ್ರಮಣ್ಯಮ್ ಇವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್ ಶಿಕ್ಷಣ ಪಡೆಯುತ್ತಿದ್ದಾರೆ. ಭರತನಾಟ್ಯ, ಚಿತ್ರಕಲೆ, ಭಜನೆ ಹಾಗೂ ಯಕ್ಷಗಾನ ಹವ್ಯಾಸಗಳಲ್ಲೂ ವಿಶೇಷ ಅಭಿರುಚಿ ಬೆಳೆಸಿಕೊಂಡಿರುತ್ತಾರೆ. ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಸಂಘ, ಉಡುಪಿ ಇದರ ಹಳೆ ವಿದ್ಯಾರ್ಥಿಯೂ ಆಗಿರುತ್ತಾರೆ. ಇವರು ನಮ್ಮ ಸಂಘದ ಹಾಲಿ ನಿರ್ದೇಶಕರು ಹಾಗೂ ಬಿ.ಎಸ್.ಎನ್.ಎಲ್ ನಿವೃತ್ತ ಎ.ಜಿ.ಎಮ್ ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ ಹಾಗೂ ಸುಮಂಗಲ ಇವರ ಪುತ್ರಿ.

### ಶ್ರೀ ಶಂಕರ ಪ್ರತಿಷ್ಠಾನ, ಪ್ರಸಾದ ಭವನ

**ತೆಳ್ಳಾರು ರಸ್ತೆ, ಕಾರ್ಕಳ 574 104**

**ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ**

**ಪ್ರತಿ ವರ್ಷದಂತೆ ಈ ವರ್ಷವೂ ಕಾರ್ಕಳ ತಾಲ್ಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಭಾವಂತ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ 75% ಅಥವಾ 75% ಮೇಲ್ಪಟ್ಟು ಅಂಕಗಳಿಸಿದ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ವೇತನವನ್ನು ನಮ್ಮ ಸಂಘದ ವಾರ್ಷಿಕೋತ್ಸವದಂದು ಅಥವಾ ನಿಗದಿಪಡಿಸಿದ ದಿನದಂದು ಕೊಡಮಾಡಲಾಗುವುದು. ವಿದ್ಯಾರ್ಥಿಗಳು ಈ ಕೆಳಕಂಡ ವಿಳಾಸಕ್ಕೆ ತಮ್ಮ ಅರ್ಜಿಯೊಂದಿಗೆ (ಮೊಬೈಲ್ ನಂಬರ್, ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿ) ಅಂಕಪಟ್ಟಿಯನ್ನು ದಿನಾಂಕ 16.08.2020ರ ಒಳಗೆ ಕಳುಹಿಸಬೇಕು. ಸ್ಥಾನಿಕ ಬ್ರಾಹ್ಮಣ ವಿದ್ಯಾರ್ಥಿಗಳಲ್ಲದೆ ಬೇರೆ ಸಮಾಜದ ಅರ್ಜಿಯನ್ನು ಸ್ವೀಕರಿಸುವುದಿಲ್ಲ.**

: ನೀವು ಸಂಪರ್ಕಿಸಲು :

**ಶ್ರೀ ಕೇಶವ ರಾವ್, ಅಧ್ಯಕ್ಷರು, ಶ್ರೀ ಶಂಕರ ಪ್ರತಿಷ್ಠಾನ. ಮೊಬೈಲ್ : 9902332609**
**ಶ್ರೀ ಹರಿಶ್ಚಂದ್ರ ರಾವ್ ಕಾರ್ಯದರ್ಶಿ ಮೊಬೈಲ್ : 9482623212**
**ಶ್ರೀ ರತ್ನಾಕರ ರಾವ್ ಕೋಕ್ರಾಡಿ, ಸಂಚಾಲಕರು, ವಿದ್ಯಾನಿಧಿ ಮೊಬೈಲ್ : 9739460025**

: ಅಂಕಪ್ರತಿ ಹಾಗೂ ಅರ್ಜಿಯನ್ನು ಕಳುಹಿಸಲು ವಿಳಾಸ :

**ಶ್ರೀ ರತ್ನಾಕರ ರಾವ್ ಕೋಕ್ರಾಡಿ**
**ಸಂಚಾಲಕರು, ವಿದ್ಯಾನಿಧಿ, "ನಂದನ" ಚತುರ್ಮುಖ ಬಸದಿ ಬಳಿ, ಕಾರ್ಕಳ-574 104**

- ಕೇಶವ ರಾವ್, ಅಧ್ಯಕ್ಷರು, ಶ್ರೀ ಶಂಕರ ಪ್ರತಿಷ್ಠಾನ,
"ಮಾತೃಶ್ರೀ", ಜೋಡುರಸ್ತೆ, ಕುಕ್ಕುಂದೂರು ಅಂಚೆ 576 117

With Best Complimemts From
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## "ಸ್ಥಾನಿಕ ಬ್ರಾಹ್ಮಣ ವೈದಿಕರ ಸಂಘ"ದ ಸಭೆ

"ಸ್ಥಾನಿಕ ಬ್ರಾಹ್ಮಣ ವೈದಿಕರ ಸಂಘ"ದ ಸಭೆಯು ಸುಬ್ರಹಮಣ್ಯ ಸಭಾದ ಅಧ್ಯಕ್ಷರು ಶ್ರೀಯುತ ಹರ್ಷಕುಮಾರ್ ಕೇದಗೆ ಹಾಗೂ ಕಾನೂನು ಸಲಹೆಗಾರರು ಶ್ರೀಯುತ ಧನಂಜಯ ರಾವ್ ಹಾಗೂ ಶ್ರೀ ಮಠದ ಧರ್ಮದರ್ಶಿ ಶ್ರೀಯುತ ವೇ.ಮೂ.ವಾಗೀಶ ಶಾಸ್ತ್ರಿ ಅವರ ಮಾರ್ಗದರ್ಶನ ದಲ್ಲಿ ದಿ.11.07.2020ರಂದು ಸುಬ್ರಹ್ಮಣ್ಯ ಸದನ ಮಂಗಳೂರು ಇಲ್ಲಿ ನಡೆಯಿತು. ಇದು ಮುಖ್ಯವಾಗಿ ನಮ್ಮ ಆಡಳಿತದಲ್ಲಿರುವ ಅಥವಾ ನಮ್ಮವರಿಂದ ಪೂಜಿಸಲ್ಪಡುವ ದೇವಾಲಯಗಳ ಅರ್ಚಕರು, ಸಹಾಯಕರು ಹಾಗೂ ಸಮಾಜದ ಪೌರೋಹಿತ್ಯ ಮಾಡುವ ಇತರ ಪುರೋಹಿತರ ಹಿತ ಕಾಪಾಡುವಲ್ಲಿ ಸರಕಾರ ಅಥವಾ ಇತರ ಆಡಳಿತ ವರ್ಗದ ಮಧ್ಯೆ ಕೊಂಡಿಯಾಗುವಲ್ಲಿ ಅಥವಾ ಅನಾರೋಗ್ಯದಲ್ಲಿರುವ ಅಸಹಾಯಕ ವೈದಿಕರಿಗೆ ನೆರವಾಗುವಲ್ಲಿ ಮತ್ತು ಶಾಸ್ತ್ರ ವಿಷಯಗಳ ಸಂವಾದಕ್ಕಾಗಿ ಮಾಡಲ್ಪಟ್ಟ ಸಂಘವಾಗಿದೆ. ಇದು ಸಧ್ಯದಲ್ಲೇ ಕಾನೂನಿನ ಚೌಕಟ್ಟನ್ನು ಹೊಂದಲಿದ್ದು ಶೃಂಗೇರಿ ಜಗದ್ಗುರುಗಳಿಂದ ಆಶೀರ್ವಾದ ಮಂತ್ರಾಕ್ಷತೆ ಪಡೆಯಲಿದೆ. ಇದಕ್ಕೆ ಕಾರ್ಯಕಾರಿ ಸಮಿತಿಯನ್ನು ಮಾಡಲಾಗಿರುತ್ತದೆ.

ಗೌರವ ಅಧ್ಯಕ್ಷರು : ಶ್ರೀಯುತ ವೇ.ಮೂ. ಭವಾನಿಶಂಕರ ಉಪಾಧ್ಯಾಯ ಘನಪಾಟಿಗಳು
ಅಧ್ಯಕ್ಷರು : ಶ್ರೀಯುತ ವೆ.ಮೂ.ಗುರುಪ್ರಸಾದ ಹೆಬ್ಬಾರ್
ಗೌರವ ಸಲಹೆಗಾರರು, ಧರ್ಮದರ್ಶಿಗಳು :
ಶ್ರೀಯುತ ವೆ.ಮೂ.ವಾಗೀಶ ಶಾಸ್ತ್ರಿಗಳು, ಶ್ರೀಯುತ ವೆ.ಮೂ.ಜಗದೀಶ ಭಟ್ಟರು
ಕಾರ್ಯದರ್ಶಿ : ಶ್ರೀಯುತ ಸುಬ್ರಮಣ್ಯ ಭಟ್ಟರು
ಜತೆ ಕಾರ್ಯದರ್ಶಿ : ಶ್ರೀಯುತ ಕೃಷ್ಣ ಭಟ್ಟರು
ಕೋಶಾಧಿಕಾರಿ ಹಾಗೂ ಸಂಚಾಲಕರು ಬಂಟ್ವಾಳ ತಾಲೂಕು :
ಶ್ರೀಯುತ ವೆ.ಮೂ. ಪ್ರತಾಪ ರಾವ್
ಪ್ರ.ಸಂಚಾಲಕರು : ಶ್ರೀಯುತ ವೆ.ಮೂ. ಪ್ರಶಾಂತ ಶರ್ಮಾ
ತಾಲೂಕುವಾರು ಸಂಚಾಲಕರು, ಕಾನೂನು ಸಲಹೆಗಾರರು :
ಶ್ರೀಯುತ ಧನಂಜಯ ರಾವ್ ಬಿ.ಕೆ.

## ರೋಟರಿ ಅಧ್ಯಕ್ಷರಾಗಿ ಶ್ರೀ ಧನಂಜಯಕುಮಾರ್





ಬೆಳ್ತಂಗಡಿ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ನಮ್ಮ ಸಮಾಜದ ಹೆಸರಾಂತ ವಕೀಲ, ಕೂಡಬೆಟ್ಟು ದೇವಸ್ಥಾನದ ಮೊಕ್ತೇಸರ ಶ್ರೀ ಧನಂಜಯಕುಮಾರ್ ಇವರು ಆಯ್ಕೆಯಾಗಿದ್ದಾರೆ. 50ನೇ ವರ್ಷದ ಹೊಸ್ತಿಲಿನಲ್ಲಿರುವ ಈ ಕ್ಲಬ್ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಶ್ರೀ ಧನಂಜಯಕುಮಾರ್‌ರವರ ನೇತೃತ್ವದಲ್ಲಿ ಸಾಕಾರಗೊಳ್ಳಲಿದೆ. ಅಂತರ್ಜಾಲದಲ್ಲಿ ಇವರ ಪದಗ್ರಹಣ ಸಮಾರಂಭ ಪ್ರಸಾರವಾಗಿದ್ದು ಇವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವೆ.

## ಏಕಾದಶ ರುದ್ರಾಭಿಷೇಕ

ತಮ್ಮ 89ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಶ್ರೀ ಬಿ.ವಾಸುದೇವ ರಾವ್ ದಂಪತಿಗಳು ಕುಟುಂಬಿಕರೊಂದಿಗೆ ಸೇರಿ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ತಾ.23.06.2020ರಂದು ಏಕಾದಶ ರುದ್ರಾಭಿಷೇಕವನ್ನು ನೆರವೇರಿಸಿದರು.

SAMPATH KUMAR Mobile : 9741508881
**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ
ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



## ಶಿವ ಮಾನಸ ಪೂಜಾ ಸ್ತೋತ್ರ

–ಅಪಯಶ, ಬೆಂಗಳೂರು

ಮುತ್ತು ರತ್ನಗಳಿಂದ ರಚಿಸಿದ ಸುಖಾಸನವನ್ನು ಸ್ನಾನಕ್ಕೆ ಹಿಮಗಿರಿಯ ನಿರ್ಮಲೋದಕವನ್ನು ಧರಿಸಲು ದಿವ್ಯ ವಸ್ತ್ರವನು ನವರತ್ನದಭಾರಣವನು ಗಂಧಚಂದನ ಪುನುಗು ಕಸ್ತೂರಿ ಲೇಪನಗಳನು ಜಾಜಿ ಸಂಪಿಗೆ ಬಕುಳ ಸುವಾಸನೆಯ ಪುಷ್ಪಗಳನ್ನು ಬಿಲ್ವ ಪತ್ರೆಗಳಿಂದ ರಚಿಸಿರುವ ಮಾಲೆಗಳನ್ನು ಧೂಪ ದೀಪಗಳನ್ನು ಕರ್ಪೂರದಾರತಿಯನ್ನು ಮನಸಿನಲಿ ಕಲ್ಪಿಸಿಯೆ, ಅರ್ಪಿಸಿ ಪೂಜೆಗೈಯುವೆನು ಶಂಭೋ ಮಹಾದೇವ ದಯಾನಿಧಿಯೆ ಪಶುಪತಿಯೇ ಹೃದಯ ಮಂದಿರದೊಳೆನ್ನ ಪೂಜೆಯನು ಸ್ವೀಕರಿಸು ।೧।

ಒಂಭತ್ತು ರತ್ನಗಳಿಂದ ಸಿಂಗಾರಗೊಂಡಿರುವ ಬಂಗಾರ ಪಾತ್ರೆಯಲಿ ಹಾಕು ಸಕ್ಕರೆ ತುಪ್ಪ ಏಲಕ್ಕಿ ಕೇಸರಿಯು ಬೆರೆಸಿರುವ ಪಾಯಸವ ಐದು ವಿಧ ಭಕ್ಷ್ಯಗಳ ಹಾಲ್ಮೊಸರು ಪಾನಕವರುಚಿಯಾದ ಶಾಕಗಳ ಪಾಕಗಳ ಉದಕಗಳ ರಸಬಾಳೆ ಅಂಜೂರ ದ್ರಾಕ್ಷಿ ದಾಳಿಂಬೆಗಳ ಪಚ್ಚೆ ಕರ್ಪೂರವನು ಹಚ್ಚಿರುವ ವೀಳೆಯುವ ಮನಸಿನಲಿ ಕಲ್ಪಿಸಿಯೆ ಅರ್ಪಿಸಿ ಪೂಜೆಗೈಯುವೆನು. ಶಂಭೋ ಮಹಾದೇವ ದಯಾನಿಧಿಯ ಪಶುಪತಿಯೇ ಹೃದಯ ಮಂದಿರದೊಳೆನ್ನ ಪೂಜೆಯನು ಸ್ವೀಕರಿಸು।೨।

ಛತ್ರ ಚಾಮರಯುಗಳ ಹೊಳೆಯುವ ಕಂಚು ಕನ್ನಡಿ ಕಲಶ ವೀಣೆ ತಂಬೂರಿನಗಾರಿ ಜಾಗಟೆಕೊಂಬು ಮದ್ದಳೆ ಕಹಳೆ ಸಂಗೀತ ನೃತ್ಯಾದಿಗಳ ನವ ವಿಧ ಭಕ್ತಿಸ್ತುತ್ಯಾದಿಗಳ ಪ್ರದಕ್ಷಿಣೆ ಪ್ರಣಾಮಗಳ ಸಾಷ್ಟಾಂಗ ನಮಸ್ಕಾರಗಳ ಆಗಮ ಶಾಸ್ತ್ರ ಸೇವೆಗಳ ಸಕಲೋಪಚಾರಗಳ ನಿಗಮಾಂತರಗಳ ನಿವೇದನೆಯ ಮಾಡುವೆನು. ಸಂಕಲ್ಪ ಮಾತ್ರದಲಿ ಭಕ್ತಿಯಲಿ ಅರ್ಪಿಸುವೆ ಶಂಕರನೆ ಕರುಣೆಯಲಿ ಸ್ವೀಕರಿಸೆಂದು ಬೇಡುವೆನು ಶಂಭೋ ಮಹಾದೇವ ದಯಾನಿಧಿಯ ಪಶುಪತಿಯೇ ಹೃದಯ ಮಂದಿರದೊಳೆನ್ನ ಪೂಜೆಯನು ಸ್ವೀಕರಿಸು ।೩।

ಹೇ ಮಹಾದೇವ ಎನ್ನಾತ್ಮ ನೀನಾಗಿರುವೆ ಎನ್ನ ಮನಬುದ್ಧಿಯೇ ಗಿರಿರಾಜ ಸುತೆಯು ಪ್ರಾಣ ಕರುಣಾದಿಗಳು ನಿನ್ನ ಸಹಚಾರಿಗಳು ಎನ್ನ ದೇಹವೇ ನಿನ್ನ ಆಲಯವು ಶಿವನೇ ವಿಷಯೋಪಭೋಗಗಳು ನಿನ್ನದೇ ಪೂಜೆಗಳು ಎನ್ನ ನಿದ್ರೆಯೇ ನಿನ್ನ ಸಮಾಧಿ ಸ್ಥಿತಿ ಸೇವೆಯುನಡೆದಾಡುವುದು ನಲಿದಾಡುವುದು ನಿನ್ನದೇ ಸ್ತೋತ್ರಗಳು ಏನೆಲ್ಲ ಮಾಡುವೆನೋ ಅದು ನಿನಗೆ ಅರ್ಪಿತವು ಶಂಭೋ ಮಹಾದೇವ ದಯಾನಿಧಿಯ ಪಶುಪತಿಯೇ ಹೃದಯ ಮಂದಿರದೊಳೆನ್ನ ಪೂಜೆಯನು ಸ್ವೀಕರಿಸು ।೪।

ಕೈಯಿಂದ ಕಾಲುಗಳಿಂದ ದೇಹ ಮಾತುಗಳಿಂದ ಕಣ್ಣು ಕಿವಿಗಳು ಮತ್ತು ಮನಸು ಬುದ್ಧಿಗಳಿಂದ ಒಳಿತು ಕೆಡುಕುಗಳನ್ನು ತಿಳಿದೋ ಯಾ ತಿಳಿಯದೆಯೊ ಮಾಡಿರುವ ಅಪರಾಧಗಳ ಕ್ಷಮಿಸೋ ಶಂಕರನೆ ಸರ್ವಾಪರಾಧಗಳ ಕ್ಷಮಿಸೆಂದು ಬೇಡುವೆ ಶಿವನೆ ಜಯ ದಯಾ ಸಿಂಧೋ ಶ್ರೀ ಮಹಾದೇವ ಶಂಭೋ

ಶ್ರೀ ಶ್ರೀ ಶ್ರೀ

### ಶ್ರೀ ಕಾಮಾಕ್ಷೀ ಶಾರದಾದೇವಿಯ ಸನ್ನಿಧಾನ ಘನಪುರೀ ಸಂಸ್ಥಾನ

ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರು.
ತುಮಕೂರು ಜಿಲ್ಲೆ–572120. ಫೋನ್ : 0816 2241032

### ಋಕ್ (ಶಾಕಲ ಶಾಖೆ) ಸಂಹಿತಾ ಯಾಗವನ್ನು ಮುಂದೂಡಲಾಗಿದೆ

ಮಾನ್ಯರೇ,

ಶ್ರೀ ಮಠದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರ ಸಾನಿಧ್ಯದಲ್ಲಿ ಪ್ರತೀ ವರ್ಷ ನಡೆಯುತ್ತಿದ್ದ ಲೋಕ ಕಲ್ಯಾಣಾರ್ಥ ಋಕ್(ಶಾಕಲ ಶಾಖೆ) ಸಂಹಿತಾ ಯಾಗವನ್ನು ವಿಶ್ವದಲ್ಲಿ ತೋರಿರುವ ಕೋವಿಡ್–19 ಸಂಕಷ್ಟದ ಪ್ರಯುಕ್ತ ಸೆಪ್ಟೆಂಬರ್ ನಂತರ ನೆರವೇರಿಸಲು ನಿರ್ಧರಿಸಲಾಗಿದೆ. ಮುಂದಿನ ದಿನಾಂಕವನ್ನು ಪ್ರಕಟಿಸಲಾಗುವುದು.

ಭಕ್ತಾದಿಗಳು ಅನಾವಶ್ಯಕ ತಿರುಗಾಡದೇ ತಮ್ಮ ಹಾಗೂ ತಮ್ಮ ಕುಟುಂಬದವರ ಆರೋಗ್ಯವನ್ನು ರಕ್ಷಿಸಿಕೊಳ್ಳಬೇಕೆಂದು ವಿಜ್ಞಾಪನೆ. ಎಲ್ಲಾ ಭಕ್ತರಿಗೂ ಆಯುರ್ ಆರೋಗ್ಯ ನೀಡಲೆಂದು ಶ್ರೀ ಕಾಮಾಕ್ಷೀಶಾರದಾದೇವಿಯು ಹರಸಲಿ ಎಂದು ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರು ಆಶೀರ್ವದಿಸಿದ್ದಾರೆ.


**ಜುಲೈ 05ನೇ ಭಾನುವಾರ 2020 ವ್ಯಾಸಪೂಜಾ/ಚಾತುರ್ಮಾಸ್ಯ ಸಂಕಲ್ಪ**
**ಜುಲೈ 06 ನೇ ಸೋಮವಾರ 2020 ಉತ್ತರಪೂಜಾ ವ್ಯಾಸಾಕ್ಷತೆ**
**ಭಕ್ತಾದಿಗಳು ಮನೆಯಲ್ಲೇ ಇದ್ದು ಗುರುವಂದನೆಯನ್ನು ಕೈಗೊಳ್ಳಬೇಕಾಗಿ ವಿಜ್ಞಾಪನೆ.**

ಕಾರ್ಯನಿರ್ವಾಹಕ ವಿಶ್ವಸ್ತ ಮಂಡಳಿ ಪರವಾಗಿ
**ಶ್ರೀ ಕಾಮಾಕ್ಷೀ ಶಾರದಾಂಬ ಟ್ರಸ್ಟ್ (ರಿ), ಹೆಬ್ಬೂರು, ತುಮಕೂರು**

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು
**D. K. District Used Vehicle Dealers & Agents Association (R.), Mangalore**
**Flat No. 103, Deepa Residency, Near Preethi Apartment**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997 E-mail : laxmiprasad5010@gmail.com



## ಶುಭ ವಿವಾಹ

ಬೆಂಗಳೂರಿನಲ್ಲಿರುವ ತಂತ್ರಾಡಿ ಶ್ರೀಮತಿ ಸುಮಂಗಲ ಹಾಗೂ ಟಿ.ದೇವರಾಜ ಶ್ಯಾನುಭೋಗ್ ಇವರ ಪುತ್ರಿ **ಸುಷ್ಮಾ** ಮತ್ತು ಶ್ರೀಮತಿ ವಿಜಯಲಕ್ಷ್ಮೀ ಹಾಗೂ ಉಜ್ಜೋಡಿ ರವಿಶಂಕರ್ ರಾವ್ ಮಂಗಳೂರು ಇವರ ಪುತ್ರ, **ರಂಜನ್** ಇವರ ವಿವಾಹವು **ತಾ.13.07.2020**ನೇ ಸೋಮವಾರ ಮಂದಾರ್ತಿಯ ಜಯರಾಮ ಪುರಾಣಿಕ್ ರೆಸಿಡೆನ್ಸ್‌ನ "ದುರ್ಗಾನುಗ್ರಹ"ದಲ್ಲಿ ನೆರವೇರಿತು.

## ಉಪನಯನ

**ಚಿ| ಅಭಿನವ**


ಶ್ರೀ ಆದರ್ಶ ಮತ್ತು ಶ್ರೀಮತಿ ಜಯಾರವರ ಮಗ ಚಿ.ಅಭಿನವನ (ಬಿ. ಗೋವಿಂದ ರಾವ್ ಮತ್ತು ಅರುಂಧತಿ ಅವರ ಮೊಮ್ಮಗ) ಉಪನಯನ ಸಮಾರಂಭ ಶ್ರೀ ಉಮಾ ಮಹೇಶ್ವರ ಅಧ್ಯಾತ್ಮ ಮಂದಿರ, ಜಯನಗರ, ಬೆಂಗಳೂರಿನಲ್ಲಿ **02.07.2020** ರಂದು ನೆರವೇರಿತು.

## ನಿಧನ

### ಕುಡುಪು ರಾಜೇಂದ್ರಪ್ರಸಾದ್

ಮಂಗಳೂರಿನ ನಿವಾಸಿ ಶ್ರೀ ಕುಡುಪು ರಾಜೇಂದ್ರಪ್ರಸಾದ್‌ರವರು ತಾ.11.07.2020 ರಂದು ಮಂಗಳೂರಿನಲ್ಲಿ ನಿಧನ ಹೊಂದಿದರು.

**** ****



### ಮನೋಹರ ಎಸ್.ರಾವ್

ಮುಂಬಯಿ ಮಾತುಂಗ ನಿವಾಸಿ ಶ್ರೀ ಮನೋಹರ ಎಸ್. ರಾವ್ ತಾ.4.7.2020ರಂದು ನಿಧನ ಹೊಂದಿದರು.

**** ****



### ಶ್ರೀಮತಿ ಸುಶೀಲಮ್ಮ

ಕೊಕ್ರಾಡಿಯ ದಿ ಪ್ರಭಾಕರ ಅಧಿಕಾರಿ ಯವರ ಪತ್ನಿ ಶ್ರೀಮತಿ ಸುಶೀಲಮ್ಮ 06.07.2020ರಂದು ಕಳಸದಲ್ಲಿ ನಿಧನ ಹೊಂದಿದರು

**** ****

### ಶ್ರೀಮತಿ ಕಮಲಮ್ಮ

ದಿ| ಬಪ್ಪನಾಡು ಭಾಸ್ಕರರಾವ್‌ರವರ ಪತ್ನಿ ಶ್ರೀಮತಿ ಕಮಲಮ್ಮ ತಾ.03.07.2020 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

## ಶುಭ ಜನನ

ಸಿಂಗಾಪುರದಲ್ಲಿ ವಾಸವಾಗಿರುವ ಎಲ್ಲೂರು ಶ್ರೀ ಶಿವಪ್ರಸಾದರಾವ್ ಮತ್ತು ಶ್ರೀಮತಿ ಶುಭ ಶಿವಪ್ರಸಾದ ರಾವ್ ದಂಪತಿಗಳಿಗೆ ತಾ.**01–07–2020**ರಂದು ಸಿಂಗಾಪುರದಲ್ಲಿ ಹೆಣ್ಣು ಮಗುವಿನ ಶುಭ ಜನನವಾಗಿರುತ್ತದೆ.

**ಕವನ**

### “ಮಕ್ಕಳ ಸಾಹಿತ್ಯದ ಫಲಶ್ರುತಿ”

ಕುತೂಹಲದೊಂದಿಗೆ ಸಂತಸಕೊಡುವ
ಮಕ್ಕಳ ಒಡನಾಡಿ ಸಾಹಿತ್ಯ.
ಹಿರಿಯರು ಕಿರಿಯರು ಯುವಕರೆನ್ನದೆ
ಎಲ್ಲರು ಓದುವ ಸಾಂಗತ್ಯ.

ಬಾಲ್ಯವ ಮರೆತು ಬದುಕನುಕಟ್ಟಲು
ಸಾಧ್ಯವೇ ಹೇಳಿ ಮುಂದೆ?
ನಾವು ಬೆಳೆದರು ಬಾಲ್ಯದ ಬುತ್ತಿ
ಬರುವುದು ನಮ್ಮಯ ಹಿಂದೆ.

ಎಷ್ಟೆ ಎತ್ತರಕೆ ಏರಿದರು ನಾವು
ಬಾಲ್ಯವೇ ನಮಗೆ ಮುನ್ನುಡಿ.
ಬಾಲ್ಯದ ಲೋಕಕೆ ಹೋಗಿ ಬರಲು
ಬಾಲ್ಯ ಸಾಹಿತ್ಯವೆ ಬೆನ್ನುಡಿ

ನಮ್ಮಯ ಪರಿಸರವೇ ಪರಿವಾರ
ಮಕ್ಕಳ ಸಾಹಿತ್ಯಕೆ ಪರಿಪಾಕ.
ಹೊಸತು ಹಳೆಯವರ ಸಂಗಮವೇ
ಮಕ್ಕಳ ಸಾಹಿತಿಯ ಕಾಯಕ

ಬಾಲ್ಯವ ಕನಸುಗಳೆ ಮಕ್ಕಳಲೋಕ
ಅರಿವಿನ ಜ್ಞಾನದ ಸರಸ್ವತಿ.
ನಾವು ಓದುತ ಮಕ್ಕಳಿಗೆ ಹೇಳುವ
ಮಕ್ಕಳ ಸಾಹಿತ್ಯದ ಫಲಶ್ರುತಿ.

–ಮಾರ್ಪಳ್ಳಿ ಆರ್. ಮಂಜುನಾಥ್
9900256083

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8–00ರಿಂದ 12–00, ಸಂಜೆ 3–30ರಿಂದ 8–00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘**ಪಾರಾಯಣ**’’ ಸಂಜೆ ಗಂಟೆ 4–30ರಿಂದ

**ತಾ.07–08–2020 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10–00ರಿಂದ (ಸೇವಾ ಶುಲ್ಕ ರೂ.51/-)**

ತಾ.31–07–2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5–00ರಿಂದ 6–00ರ ವರೆಗೆ)

ತಾ.25–07–2020, ಮತ್ತು ತಾ.08–08–2020 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9–00ರಿಂದ ಮಧ್ಯಾಹ್ನ 12–00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಆಗಸ್ಟ್ ತಿಂಗಳ ಶಾಶ್ವತ ಸೇವಾಕರ್ತರ ವಿವರ

1 ಶ್ರೀ ಚಿರಂಜೀವಿ ಮೊಕಾಶಿ, ಕುಂಜಿಬೆಟ್ಟು
2 ಶ್ರೀ ವರ್ಧನ್ ಎಸ್.ಜೈನ್, ಸೂರತ್
3 (ದಿ.ಭಾಸ್ಕರ್ ರಾವ್) ಶ್ರೀಮತಿ ಕುಸುಮ ಬಿ.ರಾವ್, ಬನ್ನಂಜೆ
4 ಶ್ರೀಮತಿ ಪ್ರೀಯಾಂಕ, ದೊಂಬಿವಿಲ್ಲಿ
5 ಶ್ರೀ ವೈ.ಪ್ರಭಾಕರ್ ರಾವ್, ಕುಂಜಿಬೆಟ್ಟು
6 ಶ್ರೀ ಪಿ.ರತನ್, ಕೋಲ್ಕತ್ತಾ
7 ಶ್ರೀ ಸುರಾಲು ವೈಷ್ಣವಿ ಮಧ್ಯಸ್ಥ, ಕುಂಜಿಬೆಟ್ಟು
8 ಶ್ರೀ ಪಿ. ರತನ್ ಕೋಲ್ಕತ್ತಾ
9 ಶ್ರೀಮತಿ ವೈ.ಪ್ರೀತಿಮಾಲ, ಚಿಟ್ಪಾಡಿ
10 ಶ್ರೀ ರೋಶನ್, ಬೆಂಗಳೂರು
11 ಶ್ರೀ ಕಾರ್ತಿಕ್ ಆರ್. ರಾವ್, ಮುಂಬೈ
12 ಶ್ರೀಮತಿ.ಎನ್. ಸೀತಮ್ಮ, ಮಣಿಪಾಲ
13 ಶ್ರೀಮತಿ.ಎಮ್.ಲಲಿತ ಪಿ.ರಾವ್, ಅಜ್ಜರಕಾಡು
14 ಶ್ರೀ ಪ್ರಣವ್ ಭಟ್, ಕುಂಜಿಬೆಟ್ಟು
15 ಶ್ರೀ ಸುಶಾಂತ್ ಎಸ್.ರಾವ್, ಬೆಂಗಳೂರು
16 ಶ್ರೀ ವರುಣ್, ನ್ಯೂ ದೆಹಲಿ
17 ಶ್ರೀ ಕೆ.ಎ.ಪಿ. ರಾವ್, ನವಿ ಮುಂಬೈ
18 ಶ್ರೀ ವೈ.ಪ್ರಭಾಕರ್ ರಾವ್, ಕುಂಜಿಬೆಟ್ಟು
19 ಶ್ರೀ ಟಿ.ಆರ್.ಶಾನುಭಾಗ್, ಅಂಬಲ್ಪಾಡಿ
20 ಶ್ರೀಮತಿ ಸುಮನ ಹೆಗ್ಡೆ, ಕುಂಜಿಬೆಟ್ಟು
21 ದಿಬೊಜ್ಯೋತಿ ಮುಖರ್ಜೆ, ಬೆಂಗಳೂರು
22 ದಿಬೊತ್ತಮ್ ಮುಖರ್ಜೆ, ಬೆಂಗಳೂರು
23 ಶ್ರೀಮತಿ ಆಶಾ ರಾವ್, ನಾಸಿಕ್
24 ಶ್ರೀ ಅವಿನಾಶ್ ಬೆಳ್ಳೆ, ತಾಣೆ ಪಶ್ಚಿಮ
25 ಶ್ರೀ ಪಡುಬಿದ್ರಿ ಭವಾನಿಶಂಕರ್ ರಾವ್, ಮುಂಬೈ
26 ಶ್ರೀ ಅಶೋಕ್ ಎನ್ ಶಾನ್‌ಭಾಗ್, ಸತಾರ
27 ಶ್ರೀ ಕೃಷ್ಣ ಹೆಬ್ಬಾರ್ ಎಸ್, ಹಿರಿಯಡ್ಕ
28 ಶ್ರೀ ಕೆ.ಈಶ್ವರ ರಾವ್, ಕುಂಜೂರು
29 ಡಾ| ರಾಘವೇಂದ್ರ ರಾವ್, ಸುರತ್ಕಲ್
30 ಶ್ರೀ ಹೇಮಂತ್ ಬೆಳ್ಳೆ, ಮುಂಬೈ
31 ಶ್ರೀಮತಿ ವಿಭಾ ಮತ್ತು ರಂಜನ್ ಹರಿಕರ್, ಬೆಂಗಳೂರು
32 ಮಿಸ್ ಸಾನ್ವಿಕ ವಾಟ್ವೆ, ಕುಂಜಿಬೆಟ್ಟು
33 ಶ್ರೀಮತಿ ಸ್ವಾತಿ, ಅಂಬಲ್ಪಾಡಿ
34 ಶ್ರೀ ವಿ. ಮನೋಹರ್ ರಾವ್, ಕಾರ್ಕಳ
35 ಶ್ರೀಮತಿ ಸುಪ್ರಿಯ, ನ್ಯೂ ದೆಹಲಿ
36 ಶ್ರೀ ರಾಹುಲ್ ಬೆಳ್ಳೆ, ಬೆಂಗಳೂರು
37 ಶ್ರೀಮತಿ ಸುಪ್ರಿಯ ಕಾಮತ್, ಮೂಡಬಿದ್ರಿ
38 ಶ್ರೀ ಕೃಷ್ಣಮೂರ್ತಿ, ಕೋಟೇಶ್ವರ
39 ಶ್ರೀ ಅರ್ಜುನ್ ಹಟ್ಟಿಯಂಗಡಿ, ಮುಂಬೈ
40 ಶ್ರೀ ಮಂಜುನಾಥ ಸಿ.ಶೆಟ್ಟಿ, ಬೆಂಗಳೂರು
41 ಶ್ರೀ ಶಿವದಾಸ್ ಎಸ್.ಪೈ, ಮುಂಬೈ
42 ಶ್ರೀ ಅಶ್ವಿನಿ ಕುಮಾರ್ ಜೆ.ರಾವ್, ದೊಬಿವಿಲ್ಲಿ (ಪೂರ್ವ)
43 ಶ್ರೀ ಕೌಶಿಕ್, ದೊಡ್ಡಣಗುಡ್ಡೆ
44 ಶ್ರೀ ಟಿ.ಕೃಷ್ಣಮೂರ್ತಿ ಶಾನುಭಾಗ್, ಇಂದ್ರಾಳಿ
45 ಶ್ರೀಮತಿ ಅಕ್ಷತ ಎ.ರಾವ್, ನ್ಯೂ ಮುಂಬೈ
46 ಶ್ರೀಮತಿ ಸಾವಿತ್ರಿ ದಿನಾಕರ್ ರಾವ್, ಸಂಪಿಗೆ
47 ಶ್ರೀಮತಿ ಪ್ರತಿಮ ಕಾಮತ್, ಕುಂಜಿಬೆಟ್ಟು
48 ಶ್ರೀ ವೈ. ಹರೀಶ್ಚಂದ್ರ ರಾವ್, ಎಲ್ಲೂರು

## ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| **16–07–2020** | ಕರ್ಕಾಟಕ ಸಂಕ್ರಮಣ, ದಕ್ಷಿಣಾಯನ ಆರಂಭ, ಸರ್ವೈಕಾದಶಿ |
| **20–07–2020** | ಆಟಿ ಅಮಾವಾಸ್ಯೆ |
| **21–07–2020** | ವರ್ಷ ಋತು ಶ್ರಾವಣ ಮಾಸದ ಶುಕ್ಲ ಪಕ್ಷಾರಂಭ |
| **25–07–2020** | ನಾಗರಪಂಚಮಿ |
| **30–07–2020** | ಸರ್ವೈಕಾದಶಿ |
| **31–07–2020** | ವರಮಹಾಲಕ್ಷ್ಮೀ ವೃತ |
| **3–08–2020** | ಆಟಿ ಹುಣ್ಣಿಮೆ, ರಕ್ಷಾಬಂಧನ, ಯಜುರುಪಾಕರ್ಮ |
| **4–08–2020** | ವರ್ಷ ಋತು ಶ್ರಾವಣ ಮಾಸದ ಕೃಷ್ಣ ಪಕ್ಷಾರಂಭ |
| **7–08–2020** | ಸಂಕಷ್ಠಹರ ಚತುರ್ಥಿ, ಚಂದ್ರೋದಯ ರಾತ್ರಿ 9.40 |
| **11–08–2020** | ಚಾಂದ್ರ ಶ್ರೀಕೃಷ್ಣ ಜನ್ಮಾಷ್ಟಮಿ |
| **15–08–2020** | ಸರ್ವೈಕಾದಶಿ |
| **16–08–2020** | ಸಿಂಹ ಸಂಕ್ರಮಣ |
| **10–09–2020** | ಉಡುಪಿ ಶ್ರೀಕೃಷ್ಣ ಜನ್ಮಾಷ್ಟಮಿ |



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯೆಶಸ್ವೀ ಎಂಟರ್‌ಪ್ರೈಸಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

Ashwath
Mobile : 9480532202
9663146180
Email : aheperdoor@gmail.com
SKANDA
Digital Studio
Photography & Videography
Near Syndicate Bank
Car Street
Perdoor - 576 124
Udupi Tq. & Dist.


# ಪುಸ್ತಕ ಬಿಡುಗಡೆ ಸಮಾರಂಭದ ವರದಿ

ಕೃತಿ : ಸ್ವಾತಂತ್ರ್ಯ ಹೋರಾಟದ ಕರ್ನಾಟಕದ ಕಣ್ಮಣಿಗಳು
ಲೇಖಕ : ಎನ್. ಪದ್ಮನಾಭರಾವ್, ಲೇಖಕರು ಹಾಗೂ ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ, ಬೆಂಗಳೂರು

ದಿನಾಂಕ : 29.02.2020 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ ಶಾಸಕ ಭವನ–2 ಸಮ್ಮೇಳನ ಸಭಾಂಗಣದಲ್ಲಿ ಜರುಗಿದ ಶ್ರೀ ಎನ್.ಪದ್ಮನಾಭರಾವ್‌ರವರು ರಚಿಸಿದ “ಸ್ವಾತಂತ್ರ್ಯ ಹೋರಾಟದ ಕರ್ನಾಟಕದ ಕಣ್ಮಣಿಗಳು” ಎಂಬ ಕೃತಿಯನ್ನು ಬಿಡುಗಡೆಗೊಳಿಸಿದ ಸನ್ಮಾನ್ಯ ಡಾ.ಎಚ್.ಎಸ್. ದೊರೆಸ್ವಾಮಿಯವರು ಹಿರಿಯ ಮುತ್ಸದ್ದಿ, ಸರಳ ಸಜ್ಜನ, ಶತಾಯುಷಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮಾತನಾಡುತ್ತಾ ಶ್ರೀಯುತ ಎನ್.ಪದ್ಮನಾಭ ರಾವ್‌ರವರು 2016ರಲ್ಲಿ ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಎಂಬ ಗ್ರಂಥವನ್ನು ನನ್ನಿಂದಲೇ ಬಿಡುಗಡೆಗೊಳಿಸಿದ್ದು, ಈಗ ಅವರು ರಚಿಸಿದ ಸ್ವಾತಂತ್ರ್ಯ ಹೋರಾಟದ ಕರ್ನಾಟಕದ ಕಣ್ಮಣಿಗಳು ಎಂಬ ಕೃತಿಯನ್ನು ನನಗೆ ಅರ್ಪಣೆ ಮಾಡಿ ನನ್ನಿಂದಲೇ ಬಿಡುಗಡೆಗೊಳಿಸುತ್ತಿರುವುದು ಸಂತಸದ ವಿಚಾರ. ನಾನು ಅವರಿಗೆ ಅಭಾರಿಯಾಗಿದ್ದೇನೆ. ಶ್ರೀಯುತರು 2014ರಲ್ಲಿ ಬೆಂಗಳೂರಿನಲ್ಲಿ ನಡೆದ ಸರ್ಕಾರಿ ಭೂಕಬಳಿಕೆ ವಿರೋಧಿ ಹೋರಾಟದ ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆಂಬುದು ಅಭಿಮಾನದ ಸಂಗತಿ. ಇವೆರಡು ಪುಸ್ತಕಗಳಲ್ಲಿ ದೇಶದ ಸ್ವಾತಂತ್ರ್ಯದ ಬಗ್ಗೆ ನಮ್ಮ ಹಿರಿಯರು ತ್ಯಾಗ ಮನೋಭಾವದಿಂದ ಹೋರಾಟ ಮಾಡಿ ಸ್ವಾತಂತ್ರ್ಯ ದೊರಕಿಸಿ ಕೊಟ್ಟ ಬಗ್ಗೆ ಸಂಕ್ಷಿಪ್ತವಾಗಿ ಸಚಿತ್ರ ಮಾಹಿತಿಯೊಂದಿಗೆ ಮನಮುಟ್ಟುವಂತೆ ನಿರೂಪಿಸಿದ್ದಾರೆ. ಇನ್ನೂ ಹೆಚ್ಚಿನ ಕೃತಿಗಳನ್ನು ಹೊರತಂದು ಶ್ರೀ ಎನ್. ಪದ್ಮನಾಭ ರಾವ್‌ರವರ ಕನ್ನಡ ನಾಡು, ನುಡಿಯ ಸೇವೆ ನಿರಂತರವಾಗಿರಲಿ ಎಂದು ಹಾರೈಸಿದರು. ನಂತರ ಸನ್ಮಾನ್ಯ ಶ್ರೀ ಎನ್. ಸಂತೋಷ್ ಹೆಗ್ಡೆಯವರು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಮತ್ತು ಕರ್ನಾಟಕ ಲೋಕಾಯುಕ್ತದ ನಿವೃತ್ತ ಲೋಕಾಯುಕ್ತರು. ಮುಖ್ಯ ಅತಿಥಿಗಳಾಗಿ ಬಂದು ತಮ್ಮ ಅಮೂಲ್ಯವಾದ ಜೀವನ ಮೌಲ್ಯಗಳನ್ನು ತಮ್ಮದೇ ಆದ ಸ್ವಾರಸ್ಯಕರ ಮಾತುಗಳಿಂದ "ಈ ದಿನ ಜನ ಯಾರೂ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸಿಕೊಳ್ಳದೆ ಸ್ವಾರ್ಥ ತುಂಬಿದ ಬದುಕಿನಿಂದ ಜೀವನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಮಾನವೀಯತೆ ದೇಶಾಭಿಮಾನ, ಮಾಯವಾಗುತ್ತಿದೆ" ಎಂದು ಕೆಲವು ಉದಾಹರಣೆಯೊಂದಿಗೆ ನೀಡಿ ತಮ್ಮ ಬೇಸರ ವ್ಯಕ್ತಪಡಿಸಿದರು. ಜೀವನದಲ್ಲಿ ದೇಶಾಭಿಮಾನ ಮತ್ತು ಮಾನವೀಯತೆ ಬೆಳಸಿಕೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡಿದರು. ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ಮಾತನಾಡಿ ಇಂದಿನ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚಿತ್ರವನ್ನು ಮನದಟ್ಟು ಮಾಡಿಕೊಂಡು ಕರ್ತವ್ಯ ಪ್ರಜ್ಞೆ, ದೇಶಾಭಿಮಾನ ಬೆಳೆಸಿಕೊಂಡಾಗ ಮಾತ್ರ ಸತ್ಪ್ರಜೆಯಾಗಿ ದೇಶ ಸೇವೆ ಮಾಡುವಂತಾಗಬೇಕೆಂದು ತಮ್ಮ ಅಭಿಪ್ರಾಯವನ್ನು ಸ್ವಾರಸ್ಯಕರವಾಗಿ ಮನ ಮುಟ್ಟುವಂತೆ ವ್ಯಕ್ತಪಡಿಸಿದರು.



ಎಡದಿಂದ ಬಲಕ್ಕೆ : ಶ್ರೀ ಎನ್.ಪದ್ಮನಾಭ ರಾವ್ ಲೇಖಕರು, ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ, ಶ್ರೀ.ಎನ್. ಸಂತೋಷ್ ಹೆಗ್ಡೆ, ನಿವೃತ್ತ ನ್ಯಾಯ ಮೂರ್ತಿ ಹಾಗೂ ಮಾಜಿ ಲೋಕಾಯುಕ್ತರು. ಡಾ. ಎಚ್.ಎಸ್. ದೊರೆ ಸ್ವಾಮಿ, ಶತಾಯುಷಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಶ್ರೀ.ಎ.ಟಿ ರಾಮಸ್ವಾಮಿ, ಶಾಸಕರು. ಶ್ರೀಮತಿ ಬಿ.ಟಿ. ಲಲಿತ ನಾಯಕ್ ಮಾಜಿ ಸಚಿವರು, ಲೇಖಕಿ ಹಾಗೂ ಸಾಮಾಜಿಕ ಹೋರಾಟಗಾರ್ತಿ ಮತ್ತು ಶ್ರೀ ರಂಗಾಚಾರ ಪ್ರಕಾಶಕರು, ಬೆಂಗಳೂರು

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಸನ್ಮಾನ್ಯ ಶಾಸಕ ಶ್ರೀ ಎ.ಟಿ. ರಾಮಸ್ವಾಮಿಯವರು ಮಾತನಾಡಿ ಶ್ರೀ .ಎನ್.ಪದ್ಮನಾಭರವರು ಹಲವು ವರ್ಷಗಳಿಂದ ಚಿರಪರಿಚಿತರು. ಸರಳ ಸಜ್ಜನಿಕೆಯವರು. ಕೇಂದ್ರ ಗ್ರಂಥಾಲಯದ ಅಧಿಕಾರಿಗಳಾಗಿ ನಿವೃತ್ತರಾದವರು. 2014ರಲ್ಲಿ ನಡೆದ ಸರ್ಕಾರಿ ಭೂಕಬಳಿಕೆ ವಿರೋಧಿ ಹೋರಾಟ ಸಮಿತಿಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವರು. ಶ್ರೀಯುತರು ಹೃದಯವಂತರು, ಧೀಶಕ್ತಿವುಳ್ಳವರು, ಸಮಾಜದ ಸ್ವಾಸ್ಥ್ಯದ ಬಗ್ಗೆ ಕಾಳಜಿವುಳ್ಳವರು. ಅಂಥವರು ಈ ಕಾರ್ಯಕ್ರಮ ಏರ್ಪಡಿಸಿದ್ದು ಅಭಿಮಾನದ ಸಂಗತಿ. ಪೂಜ್ಯ ಶ್ರೀ. ಹೆಚ್. ಎಸ್. ದೊರೆಸ್ವಾಮಿಯವರು ಇವರ ಪುಸ್ತಕ ಬಿಡುಗಡೆಗೊಳಿಸಿ ಅಭಿಮಾನದ ಮಾತನ್ನಾಡಿ ಕಾರ್ಯಕ್ರಮಕ್ಕೆ ಕಳೆಕೊಟ್ಟಿದ್ದಾರೆ. ಶ್ರೀ ಸಂತೋಷ್ ಹೆಗ್ಡೆಯವರು ಜೀವನದ ಮೌಲ್ಯಗಳನ್ನು ಮತ್ತು ಮಾನವೀಯತೆಯ ಬಗ್ಗೆ ಮಾತನಾಡಿ ನಮ್ಮ ಕಣ್ಣು ತೆರೆಸಿದ್ದಾರೆ. ಶ್ರೀಮತಿ. ಬಿ.ಟಿ. ಲಲಿತಾನಾಯಕ್ ರವರು ನ್ಯಾಯ, ನೀತಿಗೆ ಎಲ್ಲಿಯಾದರೂ ವಂಚನೆಯಾದರೆ ಹೋರಾಟದ ಮನೋಭಾವನೆ ಬೆಳೆಸಿಕೊಳ್ಳಬೇಕೆಂಬ ಅರ್ಥಪೂರ್ಣ ಮಾತುಗಳು ಸ್ಮರಣೀಯ. ಇಂತಹ ಗಣ್ಯರನ್ನು ಕರೆಸಿ ಕಾರ್ಯಕ್ರಮದ ಗೌರವವನ್ನು ಹೆಚ್ಚಿಸಿದ ಶ್ರೀ.ಎನ್. ಪದ್ಮನಾಭರಾವ್‌ರವರಿಗೆ ಮನಸಾರೆ ಅಭಿನಂದಿಸುತ್ತೇನೆಂದು ನುಡಿದರು. ಅಲ್ಲದೆ ಪ್ರಾಸ್ತಾವಿಕ ಭಾಷಣದಲ್ಲಿ ಲೇಖಕರು ಈ ಪುಸ್ತಕ ಪ್ರಕಟಣೆ ಕುರಿತು ಕಿರು ಪರಿಚಯವನ್ನು ನೀಡಿ ಶುಭ ಹಾರೈಸಿದರು. ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸ್ಲೈಡ್ಸ್ ರೂಪದಲ್ಲಿ ವಸ್ತುಪ್ರದರ್ಶನವನ್ನು ಲೇಖಕರು ಏರ್ಪಡಿಸಿದ್ದು, ಆಕರ್ಷಣೀಯ ಮತ್ತು ಅರ್ಥಪೂರ್ಣವಾಗಿತ್ತು. ಕಾರ್ಯಕ್ರಮವು ಶ್ರೀ ಎಸ್.ಎಸ್. ಪಡಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಇದರ ಮೊದಲು ಶ್ರೀ. ಎಸ್.ಎಸ್. ಪಡಶೆಟ್ಟಿ ಮತ್ತು ಶ್ರೀ . ರಮೇಶ ಜಮದಗ್ನಿಯವರಿಂದ ಸುಶ್ರಾವ್ಯವಾದ ಸುಗಮ ಸಂಗೀತ ಭಾವಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ಕಳೆಕೊಟ್ಟರು. ಈ ಸಭಾಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಮದಾಪುರ ಸುಬ್ಬಣ್ಣನವರು ಅಚ್ಚುಕಟ್ಟಾಗಿ ನಿರೂಪಿಸಿ ಅತಿಥಿಗಳಿಗೆ ಹಾಗೂ ಸಭಿಕರಿಗೆ ವಂದನಾರ್ಪಣೆ ಮಾಡಿದರು. ಕೊನೆಗೆ ಲಘು ಭೋಜನದ ವ್ಯವಸ್ಥೆಯೊಂದಿಗೆ ಸಭೆಯು ಸಮಾಪ್ತಿಗೊಂಡಿತು.

## "ಸಹಸ್ರನಾಮ ಸ್ತೋತ್ರಂ" ಸಂಸ್ಕೃತ ಗ್ರಂಥ ಬಿಡುಗಡೆ



ಜಿಲ್ಲಾ ನಾಗರಿಕ ಸಮಿತಿ ಟ್ರಸ್ಟ್ ಆಯೋಜನೆಯಲ್ಲಿ ಸಾಹಿತಿ ಹರಿಕೃಷ್ಣ ರಾವ್ ಸಗ್ರಿ ಅವರು ಸಂಗ್ರಹಿಸಿ ಪ್ರಕಾಶನ ಮಾಡಿರುವ "ಶ್ರೀಶಂಕರ ಭಗವತ್ಪಾದಾಚಾರ್ಯ ಸಹಸ್ರನಾಮ ಸ್ತೋತ್ರಂ" ಸಂಸ್ಕೃತ ಗ್ರಂಥದ ಬಿಡುಗಡೆ ಕಾರ್ಯಕ್ರಮವು ನಾಗರಿಕ ಸಮಿತಿಯ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು. ಕೋಟಕ್ ಮಹೇಂದ್ರ ಬ್ಯಾಂಕಿನ ವ್ಯವಸ್ಥಾಪಕ ಎಮ್. ದೀಪಕ್ ಕುಮಾರ್ ಅವರು ಗ್ರಂಥದ ಬಿಡುಗಡೆ ಮಾಡಿದರು. ಶ್ರೀಶಂಕರಾಚಾರ್ಯರ ತತ್ವ ಸಿದ್ಧಾಂತಗಳು, ಆಧ್ಯಾತ್ಮ ಚಿಂತನೆಗಳು ಸಮಾಜದ ಮನೆ ಮನಗಳಲ್ಲಿ ಪಸರಿಸುವಂತೆ ಮಾಡಲಿ ಎಂದು ಅತಿಥಿಯಾಗಿ ಉಪಸ್ಥಿತರಿದ್ದ ಉದ್ಯಮಿ ಮುರಳೀಧರ ಬಲ್ಲಾಳ್ ಕನ್ನರ್ಪಾಡಿ ಅವರು ಶುಭಹಾರೈಸಿದರು. ಸಾಹಿತಿ ಹರಿಕೃಷ್ಣರಾವ್ ಸಗ್ರಿ ಅವರು ಗ್ರಂಥ ಪರಿಚಯ ಮಾಡಿದರು. ನಾಗರಿಕ ಸಮಿತಿಯ ಪ್ರಧಾನ ಸಂಚಾಲಕ ನಿತ್ಯಾನಂದ ಒಳಕಾಡು, ಯುವಸಾಹಿತಿ ತಾರಾನಾಥ್ ಮೇಸ್ತ ಶಿರೂರು ಉಪಸ್ಥಿತರಿದ್ದರು.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)


## ಬಪ್ಪನಾಡು ವಿದ್ವಾನ್ ಎಸ್.ಎನ್.ರಾವ್ ಹರಿದಾಸರವರ 30ರ ಪುಣ್ಯ ಸಂಸ್ಮರಣೆ



ಶ್ರೀ ಶಂಕರನಾರಾಯಣ ರಾಯರು ಹಿಂದಿ, ಕನ್ನಡ, ಪಂಡಿತರಾಗಿ, ವೀಣಾ ಪ್ರೆಸ್ ಮಾಲಕರಾಗಿ, ಸಂಗೀತಗಾರರಾಗಿ, ಹಿಂದುಸ್ತಾನಿ ಸಂಗೀತಾಚಾರ್ಯ ಪುಸ್ತಕ ಪ್ರಕಟನೆ ಮಾಡಿ, ನಟರಾಗಿ, ನಾಟಕಗಳನ್ನು ರಚಿಸಿ, ನಾಲ್ಕು ವಾದ್ಯಗಳ ವಾದಕರಾಗಿ, ನಾಟಕ ನಿರ್ದೇಶನ, ಸಂಗೀತ ನಿರ್ದೇಶನ, ನಟನೆಯಲ್ಲಿ ಸ್ವತಃ ಭಾಗವಹಿಸಿ, ಇನ್ನೂ ಹರಿಕಥೆದಾಸರಾಗಿ, ತಾಳಮದ್ದಳೆಯ ಸೂತ್ರಧಾರಿಯಾಗಿ ಕಲಾದೇವತೆಯ ಸೇವೆಯನ್ನು ಅನನ್ಯ ಭಕ್ತಿಭಾವದಿಂದ ಪೂಜಿಸಿದ ತಮ್ಮ ನೆನಪಿಗೆ ನಮ್ಮ ಇದೊಂದು ಪ್ರೀತಿಯ ನಮನ.

–ಎಸ್.ಎನ್.ರಾವ್, ಬಂಧುಗಳು

## ಮನೆ ದುರಸ್ತಿ : ಶಾಸಕ ರಘುಪತಿ ಭಟ್ ಉದ್ಘಾಟನೆ



ಉಡುಪಿ ವಿಧಾನಸಭಾ ಕ್ಷೇತ್ರದ ನಗರಸಭಾ ವ್ಯಾಪ್ತಿಯ ಒಳಕಾಡು ವಾರ್ಡ್ ನಿವಾಸಿ ರಾಮಣ್ಣ ಶೆಟ್ಟಿ ಎಂಬುವವರ ಮನೆ ಶಿಥಿಲಗೊಂಡಿದ್ದನ್ನು ಮನಗಂಡ ಬಿಜೆಪಿ ಕಾರ್ಯಕರ್ತರೂ ಆಗಿರುವ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ್ ಹೆಬ್ಬಾರ್‌ರವರು ಇತರ ಕಾರ್ಯಕರ್ತರ ಸಹಕಾರದೊಂದಿಗೆ ದುರಸ್ತಿಗೊಳಿಸಿದರು. ತಾ.06.07.2020ರಂದು ಶಾಸಕರಾದ ಶ್ರೀ ಕೆ. ರಘುಪತಿ ಭಟ್ ಮನೆಗೆ ಭೇಟಿ ನೀಡಿ ಕಾರ್ಯಕರ್ತರ ಸೇವಾಮನೋಭಾವವನ್ನು ಶ್ಲಾಘಿಸಿ, ಸಾಂಕೇತಿಕವಾಗಿ ಉದ್ಘಾಟಿಸಿ ಹಸ್ತಾಂತರಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಘವೇಂದ್ರ ಕಿಣಿ, ಸ್ಥಳೀಯ ನಗರಸಭಾ ಸದಸ್ಯರಾದ ರಜನಿ ಹೆಬ್ಬಾರ್, ಬೂತ್ ಅಧ್ಯಕ್ಷರಾದ ಪ್ರತಾಪ್ ಮತ್ತು ಉದ್ಯಮಿಗಳಾದ ನಾಗೇಶ್ ಹೆಗ್ಡೆ, ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

## ಅರ್ಚಕರಿಗೆ ಮಹಾಮಂಡಲದಿಂದ ಸಹಾಯಧನ



ತಾ.23.06.2020ರಂದು ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕಾರ್ಯಕಾರಿ ಸಮಿತಿಯ ಸಭೆ ಮಂಗಳೂರಿನಲ್ಲಿ ನೆರವೇರಿತು. ಬೆಂಗಳೂರಿನಲ್ಲಿ ನಡೆದ ಯಶಸ್ವಿ ಸಮಾವೇಶದ ಹಿನ್ನಲೆಯಲ್ಲಿ ಸಮಾವೇಶದ ಖರ್ಚುವೆಚ್ಚಗಳನ್ನು ವಿಶೇಷವಾಗಿ ಚರ್ಚಿಸಲಾಯಿತು. ಕೊರೊನ ಹಾಗೂ ಲಾಕ್‌ಡೌನ್ನಿಂದ ಸಂಕಷ್ಟಕೊಳಗಾಗಿರುವ ನಮ್ಮ ದೇವಸ್ಥಾನಗಳು ಹಾಗೂ ಅದರ ಅರ್ಚಕರನ್ನು ಗುರುತಿಸಿ ಅವರಿಗೆ ಸಹಾಯಧನ ನೀಡಲು ನಿರ್ಧರಿಸಲಾಯಿತು. ಹಾಗೆಯೇ ವೈದ್ಯಕೀಯ ನೆರವಿಗೆ ಮನವಿ ಸಲ್ಲಿಸಿರುವವರಿಗೂ ನೆರವು ನೀಡಲು ನಿರ್ಧರಿಸಲಾಯಿತು. ಮಹಾಮಂಡಲದ ಅಧ್ಯಕ್ಷರಾದ ಶ್ರೀ ಜಗನ್ನಿವಾಸರಾವ್ ಪ್ರಾಸ್ತಾವಿಕವಾಗಿ ಮಾತನಾಡಿ ಸಮಾವೇಶದ ಯಶಸ್ಸಿಗೆ ಕಾರಣೀಭೂತರಾದವರನ್ನು ಸ್ಮರಿಸಿ ದರು. ಉಪಾಧ್ಯಕ್ಷರಾದ ಡಾ|ವೈ.ಸುದರ್ಶನ ರಾವ್, ಸ್ಥಾಪಕ ಅಧ್ಯಕ್ಷ ಶ್ರೀ ಸಿ.ಎಸ್.ರಾವ್, ಖಜಾಂಚಿ ಶ್ರೀ ಉದಯ್ ಕುಮಾರ್ ಜೊತೆಕಾರ್ಯದರ್ಶಿ ಶ್ರೀ ನಂದಿಕೂರು ಜನಾರ್ಧನರಾವ್ ಉಪಸ್ಥಿತರಿದ್ದರು. ಕಾರ್ಯದರ್ಶಿ ಶ್ರೀ ದೇವಾನಂದ್ ವರದಿ ವಾಚಿಸಿ ಧನ್ಯವಾದವಿತ್ತರು.

## ನೂರನೇ ವರ್ಷದ ನೆನಪುಗಳೊಂದಿಗೆ......



**ದಿ| ಕರಂಬಳ್ಳಿ ಕೃಷ್ಣ ರಾವ್ ಹಾಗೂ ಲಕ್ಷ್ಮೀ ಕೆ.ರಾವ್**

~: ಮಾತಾಪಿತರಾದ ನಿಮ್ಮನ್ನು ಸದಾ ಸ್ಮರಿಸುವ :~


ಶ್ರೀಮತಿ ಲೀಲಾ ಹಾಗೂ ಶ್ರೀ ಕರಂಬಳ್ಳಿ ವೆಂಕಟ ರಾವ್
ಶ್ರೀ ನಟೇಶ್ ವೆಂಕಟ ರಾವ್
ಶ್ರೀಮತಿ ನೀತಾ ಹಾಗೂ ಶ್ರೀ ದಿನೇಶ್ ರಾವ್
ಶ್ರೀಮತಿ ವಿದ್ಯಾ ಹಾಗೂ ಶ್ರೀ ಕರಂಬಳ್ಳಿ ಮೋಹನ್ ರಾವ್
ಶ್ರೀಮತಿ ಶ್ವೇತಾ ಹಾಗೂ ಶ್ರೀ ನವೀನ್‌ರಾಜ್ ರಾವ್
ಕುಮಾರಿ ಸ್ಮಿತಾ ಮೋಹನ್ ರಾವ್


ವೃಂದಾವನ್ ನೆಸ್ಟ್
ಶುದ್ಧ ಸಸ್ಯಾಹಾರಿ
ಎನ್.ಎಚ್. 66, ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990960



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೆಲ್ ವೃಂದಾವನ ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್ ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್ ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್ ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ




With Best Compliments From :

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org